Reg No. D. 221

# भारत का राजपत्र
# The Gazette of India
# ಭಾರತ ರಾಜ ಪತ್ರ

**(EXTRAORDINARY)**

**ವಿಶೇಷ ಸಂಚಿಕೆ**


**भाग—IX** **अनुभाग 1**

PART IX SECTION 1

ಭಾಗ IX ವಿಭಾಗ 1

**प्राधिकार से प्रकाशित**

Published by Authority

ಪ್ರಾಧಿಕಾರದ ಮೇರೆಗೆ ಪ್ರಕಟಿತವಾಗಿದೆ

| | | | |
|---|---|---|---|
| सं—1 | नई दिल्ली सोमवार, मार्च 2, 1987 | फाल्गुण 11, 1908 (शक) | खन्ड—7 |
| No. 1 | New Delhi Monday, March 2, 1987 | Phalguna 11, 1908 (Saka) | Vol. 7 |
| ಸಂಖ್ಯೆ ೧ | ನವದೆಹಲಿ ಸೋಮವಾರ, ಮಾರ್ಚ್ ೨, ೧೯೮೭ | ಫಾಲ್ಗುಣ ೧೧, ೧೯೦೮ (ಶಕ) | ಸಂಪುಟ ೭ |


## MINISTRY OF LAW AND JUSTICE
(Legislative Department)

New Delhi, November 23, 1986

The translations in Kannada of the following namely—(1) The Official Languages Act, 1963 (2) The Protection of Civil Rights Act, 1955 (3) The Hindu Marriage Act, 1955 (4) The Indian Partnership Act, 1932 (5) The Specific Relief Act, 1963—are hereby published under the authority of the president and shall be deemed to be the authorised translations thereof in Kannada under clause (a) of section 2 of the Authorised Translations (Central Laws) Act, 1973 (50 of 1973).

ಕೆಳಕಂಡ ಅಧಿನಿಯಮಂಗಳು ಎಂದರೆ (೧) ರಾಜ ಭಾಷಾ ಅಧಿನಿಯಮಂ, ೧೯೬೩ (೨) ನಾಗರೀಕ ಹಕ್ಕುಗಳ ಸಂರಕ್ಷಣಾ ಅಧಿನಿಯಮಂ, ೧೯೫೫ (೩) ಹಿಂದೂ ವಿವಾಹ ಅಧಿನಿಯಮಂ, ೧೯೫೫ (೪) ಭಾರತೀಯ ಪಾಲುಗಾರಿಕೆ ಅಧಿನಿಯಮಂ, ೧೯೩೨ (೫) ನಿರ್ದಿಷ್ಟ ಪರಿಹಾರ ಅಧಿನಿಯಮಂ, ೧೯೬೩—ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು, ಅಧಿಕೃತ ಭಾಷಾಂತರಗಳ ಅಧಿನಿಯಮಂ, ೧೯೭೩ ರ (೧೯೭೩ ರ ೫೦) ೨ನೇ ಪ್ರಕರಣದ (ಕ) ಖಂಡದ ಮೇರೆಗೆ ಇವುಗಳನ್ನು ಈ ಅಧಿನಿಯಮಂಗಳ ಅಧಿಕೃತ ಕನ್ನಡ ಭಾಷಾಂತರವೆಂದಂ ಭಾವಿಸತಕ್ಕುದಂ.

# ನಿರ್ದಿಷ್ಟ ಪರಿಹಾರ ಅಧಿನಿಯಮ, 1963

(1963ರ 47)

(13 ನೆಯ ಡಿಸೆಂಬರ್, 1963)

ಕೆಲವು ಬಗೆಯ ನಿರ್ದಿಷ್ಟ ಪರಿಹಾರಗಳಿಗೆ ಸಂಬಂಧಿಸಿದ ವಿಧಿಯನ್ನು ಪರಿಭಾಷಿಸುವ ಮತ್ತು ತಿದ್ದುಪಡಿ ಮಾಡುವ ಅಧಿನಿಯಮ.

ಭಾರತದ ಗಣರಾಜ್ಯದ ಹದಿನಾಲ್ಕನೆಯ ವರ್ಷದಲ್ಲಿ, ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿಸಲಾಗಿದೆ.—

## ಭಾಗ—೧

## ಪ್ರಾರಂಭಿಕ

1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಪ್ರಾರಂಭ.— (1) ಈ ಅಧಿನಿಯಮವನ್ನು ನಿರ್ದಿಷ್ಟ ಪರಿಹಾರ ಅಧಿನಿಯಮ, 1963 ಎಂದು ಕರೆಯತಕ್ಕದು.

(2) ಇದು ಜಮ್ಮು ಮತ್ತು ಕಾಶ್ಮೀರ ರಾಜ್ಯದ ಹೊರತು ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ,

(೩) ಇದು ಕೇಂದ್ರ ಸರಕಾರವು ಸರಕಾರೀ ರಾಜ್ಯಪತ್ರದಲ್ಲಿ, ಅಧಿಸೂಚನೆಯ ಮೂಲಕ ನೇಮಿಸಬಹುದಾದಂಥ ತಾರೀಖಿನಂದು ಜಾರಿಯಲ್ಲಿ ಬರತಕ್ಕದು.

2. ಪರಿಭಾಷೆಗಳು.—ಈ ಅಧಿನಿಯಮದಲ್ಲಿ ಸಂದರ್ಭಕ್ಕೆ ಬೇರೆ ಅರ್ಥದ ಅಗತ್ಯ ವಿರದಿದ್ದರೆ.—

(ಕ) ''ಹೊಣೆಗಾರಿಕೆ'' ಎಂಬುದು ವಿಧಿಮೂಲಕ ಜಾರಿಗೊಳಿಸಬಹುದಾದ ಪ್ರತಿಯೊಂದು ಕರ್ತವ್ಯವನ್ನೂ ಒಳಗೊಳ್ಳುತ್ತದೆ.

(ಖ) ''ವ್ಯವಸ್ಥಾಪನೆ'' ಎಂದರೆ ಚರ ಅಥವಾ ಸ್ಥಿರ ಸ್ವತ್ತಿನಲ್ಲಿ ಒಂದಾದ ಮೇಲೊಂದು ಬರುವ ಹಿತಾಸಕ್ತಿಗಳ ಗುರಿಯನ್ನು ಅಥವಾ ಪ್ರಾಪ್ತಿಯನ್ನು ವಿಲೆ ಮಾಡ ಲಾಗ ಅಥವಾ ವಿಲೆ ಮಾಡಲು ಒಪ್ಪಿಕೊಳ್ಳಲಾದ [ಭಾರತ ಉತ್ತರಾಧಿಕಾರ ಅಧಿನಿಯಮ, 1925 (1925 ರ 39)ರ ಮೂಲಕ ಪರಿಭಾಷಿಸಲಾದಂತೆ ಮರಣಶಾಸನ ಅಥವಾ ಮರಣ ಶಾಸನ ಅಥವಾ ಮರಣಶಾಸನಾನುಬಂಧವಾಗಿರದ) ಲಿಖಿತ,

(ಗ) ''ನ್ಯಾಸ'' ಎಂಬುದಕ್ಕೆ ಭಾರತ ನ್ಯಾಸಗಳ ಅಧಿನಿಯಮ, 1882 (1882ರ ?) ರ 3 ನೆಯ ಪ್ರಕರಣದಲ್ಲಿ ಇರುವ ಅರ್ಥವೇ ಇರುತ್ತದೆ ಅದು ಆ ಅಧಿ ನಿಯಮದ IXನೆಯ ಅಧ್ಯಾಯದ ಅರ್ಥದಲ್ಲಿರುವ ನ್ಯಾಸ ಸ್ವರೂಪದ ಹೊಣೆಗಾರಿಕೆ ಯನ್ನೂ ಒಳಗೊಳ್ಳುತ್ತದೆ,

(ಘ) "ನ್ಯಾಸಧಾರಿ" ಎಂಬುದು ಸ್ವತ್ತನ್ನು ನ್ಯಾಸವಾಗಿಟ್ಟುಕೊಂಡ ಪ್ರತಿಯೊಬ್ಬ ವ್ಯಕ್ತಿಯನ್ನೂ ಒಳಗೊಳ್ಳುತ್ತದೆ,

(ಙ) ಇಲ್ಲಿ ಉಪಯೋಗಿಸಲಾದ ಆದರೆ ಪರಿಭಾಷಿಸಿರುವ ಇತರ ಎಲ್ಲ ಪದಗಳು ಕರಾರು ಅಧಿನಿಯಮ, 1872 (1872 ರ 9)ರಲ್ಲಿ ಪರಿಭಾಷಿಸಿರುವ ಇತರ ಎಲ್ಲ ಪದಗಳು ಮತ್ತು ಅಭಿವ್ಯಕ್ತಿಗಳು ಆ ಅಧಿನಿಯಮದಲ್ಲಿ ಅನುಕ್ರಮವಾಗಿ ಅವುಗಳಿಗೆ ಕೊಟ್ಟಿರುವ ಅರ್ಥವನ್ನೇ ಹೊಂದಿರುತ್ತವೆ.

3. ಉಳಿಸುವಿಕೆಗಳು.—ಇದರಲ್ಲಿ ಅನ್ಯಥಾ ಉಪಬಂಧಿಸಿದಂತಲ್ಲದೆ, ಈ ಅಧಿನಿಯಮದಲ್ಲಿರುವ ಯಾವುದೂ

(ಕ) ಯಾವನೇ ವ್ಯಕ್ತಿಯನ್ನು ಅವನು ಯಾವುದೇ ಕರಾರಿನ ಮೇರೆಗೆ ಹೊಂದಿರಬಹುದಾದ, ನಿರ್ದಿಷ್ಟ ಪಾಲನೆಯಲ್ಲದ ಯಾವುದೇ ಪರಿಹಾರದ ಅಧಿಕಾರದಿಂದ ತಪ್ಪಿಸುವುದೆಂದು, ಅಥವಾ

(ಖ) ದಸ್ತಾವೇಜುಗಳ ಬಗ್ಗೆ ಭಾರತ ನೋಂದಣಿ ಅಧಿನಿಯಮ, 1908 (1908ರ 16)ರ ಪ್ರವರ್ತನೆಯ ಮೇಲೆ ಪರಿಣಾಮವನ್ನುಂಟು ಮಾಡುವುದೆಂದು, ಭಾವಿಸತಕ್ಕುದಲ್ಲ.

4. ನಿರ್ದಿಷ್ಟ ಪರಿಹಾರವನ್ನು ವೈಯುಕ್ತಿಕ ಸಿವಿಲ್ ಅಧಿಕಾರಗಳನ್ನು ಜಾರಿಗೆ ತರುವುದುದಕ್ಕೆ ಮಾತ್ರ ಕೊಡತಕ್ಕದು. ದಂಡವಿಧಿಗಳನ್ನು ಜಾರಿಗೆ ತರುವುದಕ್ಕೆ ಅಲ್ಲ.— ನಿರ್ದಿಷ್ಟ ಪರಿಹಾರವನ್ನು, ವೈಯುಕ್ತಿಕ ಸಿವಿಲ್ ಅಧಿಕಾರಗಳನ್ನು ಜಾರಿಗೆ ತರುವ ಉದ್ದೇಶಕ್ಕಾಗಿ ಮಾತ್ರ ಕೊಡತಕ್ಕದೇ ಹೊರತು, ಕೇವಲ ದಂಡವಿಧಿಯೊಂದರ ಜಾರಿಗಾಗಿ ಅಲ್ಲ.

## ಭಾಗ-2

## ನಿರ್ದಿಷ್ಟ ಪರಿಹಾರ

## ಅಧ್ಯಾಯ I

### ಸ್ವತ್ತಿನ ಸ್ವಾಧೀನವನ್ನು ಪಡೆದುಕೊಳ್ಳುವುದು

5. ನಿರ್ದಿಷ್ಟ ಸ್ಥಿರ ಸ್ವತ್ತನ್ನು ಮತ್ತೆ ಪಡೆದುಕೊಳ್ಳುವುದು.— ನಿರ್ದಿಷ್ಟ ಸ್ಥಿರ ಸ್ವತ್ತಿನ ಸ್ವಾಧೀನಕ್ಕೆ ಹಕ್ಕುಳ್ಳ ವ್ಯಕ್ತಿಯು, ಸಿವಿಲ್ ಪ್ರಕ್ರಿಯಾ ಸಂಹಿತೆ 1908 (1908ರ 5) ರ ಮೂಲಕ ಉಪಬಂಧಿಸಿರುವ ರೀತಿಯಲ್ಲಿ ಅದನ್ನು ಪಡೆದುಕೊಳ್ಳಬಹುದು.

6. ಸ್ಥಿರ ಸ್ವತ್ತಿನ ಸ್ವಾಧೀನ ಕಳೆದುಕೊಂಡ ವ್ಯಕ್ತಿಯಿಂದ ದಾವೆ.—(1) ಯಾವನೇ ವ್ಯಕ್ತಿಯು ಸ್ಥಿರ ಸ್ವತ್ತಿನ ಸ್ವಾಧೀನವನ್ನು ವಿಧಿಯುಕ್ತ ಕ್ರಮದಿಂದಲ್ಲದೆ ಅವನ ಸಮ್ಮತಿ ಇಲ್ಲದೆ ತಪ್ಪಿಸಿರುವಲ್ಲಿ ಅವನು ಅಥವಾ ಅವನ ಮೂಲಕ ಹಕ್ಕು ಸಾಧಿಸುವ ಯಾವನೇ ವ್ಯಕ್ತಿಯು, ದಾವೆಯ ಮೂಲಕ, ಅಂಥ ದಾವೆಯಲ್ಲಿ ಬೇರೆ ಯಾವುದೇ ಹಕ್ಕನ್ನು ಮಂಡಿಸಬಹುದಾದರೂ, ಅದರ ಸ್ವಾಧೀನವನ್ನು ಪಡೆದುಕೊಳ್ಳಬಹುದು.

(2) ಈ ಪ್ರಕರಣದ ಮೇರೆಗೆ ಯಾವ ದಾವೆಯನ್ನೂ—

(ಕ) ಸ್ವಾಧೀನ ಕಳೆದುಕೊಂಡ ತಾರೀಖಿನಿಂದ ಆರು ತಿಂಗಳು ಗತಿಸಿದ ಬಳಿಕ, ಅಥವಾ

(ಖ) ಸರ್ಕಾರದ ವಿರುದ್ಧ,

—ಹೂಡತಕ್ಕದ್ದಲ್ಲ.

(3) ಈ ಪ್ರಕರಣದ ಮೇರೆಗೆ ಹೂಡಿದ ಯಾವುದೇ ದಾವೆಯಲ್ಲಿ ಮಾಡಿದ ಯಾವುದೇ ಆದೇಶದ ಅಥವಾ ಡಿಕ್ರಿಯ ಮೇಲೆ ಯಾವ ಅಪೀಲೂ ಇರತಕ್ಕದ್ದಲ್ಲ, ಮತ್ತು ಅಂಥ ಯಾವುದೇ ಆದೇಶ ಅಥವಾ ಡಿಕ್ರಿಯ ಪುನರವಲೋಕನೆಗೆ ಅವಕಾಶವಿರತಕ್ಕದ್ದಲ್ಲ;

(4) ಈ ಪ್ರಕರಣದಲ್ಲಿರುವುದಾವುದೂ, ಯಾವನೇ ವ್ಯಕ್ತಿಯು ಅಂಥ ಸ್ವತ್ತಿಗೆ ತನಗಿರುವ ಹಕ್ಕನ್ನು ಸ್ಥಾಪಿಸುವುದಕ್ಕೆ ಮತ್ತು ಅದನ್ನು ಪುನ: ಸ್ವಾಧೀನ ಪಡೆದುಕೊಳ್ಳುವುದಕ್ಕೆ ಅಡ್ಡಿಯಾಗತಕ್ಕದ್ದಲ್ಲ.

**7. ನಿರ್ದಿಷ್ಟ ಚರ ಸ್ವತ್ತನ್ನು ಮತ್ತೆ ಪಡೆಯುವುದು.**— ನಿರ್ದಿಷ್ಟ ಚರ ಸ್ವತ್ತಿನ ಸ್ವಾಧೀನಕ್ಕೆ ಹಕ್ಕುಳ್ಳ ವ್ಯಕ್ತಿಯು, ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5)ರಲ್ಲಿ ಉಪಬಂಧಿಸಿರುವ ರೀತಿಯಲ್ಲಿ ಅದನ್ನು ಪಡೆಯಬಹುದು.

ವಿವರಣೆ. 1.— ನ್ಯಾಸಧಾರಿಯು, ಯಾವ ವ್ಯಕ್ತಿಯ ಪರವಾಗಿ ತಾನು ನ್ಯಾಸಧಾರಿಯಾಗಿರುವನೋ ಅವನಿಗೆ ಲಾಭದಾಯಕ ಹಿತಾಸಕ್ತಿಯ ಹಕ್ಕಿರುವ ಚರಸ್ವತ್ತಿನ ಸ್ವಾಧೀನಕಾಗಿ ಈ ಪ್ರಕರಣದ ಮೇರೆಗೆ ದಾವೆ ಹೂಡಬಹುದು.

ವಿವರಣೆ. 2.— ಚರ ಸ್ವತ್ತಿನ ಸದ್ಯ ಸ್ವಾಧೀನಕ್ಕೆ ಇರುವ ವಿಶೇಷ ಅಥವಾ ಹಂಗಾಮಿ ಅಧಿಕಾರವು, ಈ ಪ್ರಕರಣದ ಮೇರೆಗಿನ ದಾವೆಯನ್ನು ಸಮರ್ಥಿಸಲು ಸಾಕಾಗುವುದು,

8. ಒಡೆಯನಂತಲ್ಲದೆ ಸ್ವತ್ತಿನ ಸ್ವಾಧೀನ ಪಡೆದಿರುವ ವ್ಯಕ್ತಿಯು ಅದರ ಸ್ವಾಧೀನವನ್ನು ಕೂಡಲೇ ಹೊಂದಲು ಹಕ್ಕುಳ್ಳ ವ್ಯಕ್ತಿಗಳಿಗೆ ಅದನ್ನು ಒಪ್ಪಿಸಿಕೊಡಬೇಕಾದ ಹೊಣೆ — ತಾನು ಒಡೆಯನಾಗಿರದ ಯಾವುದೇ ವಿಶಿಷ್ಟ ಚರಸ್ವತ್ತಾಗಿರುವ ವಸ್ತುವನ್ನು ತನ್ನ ಸ್ವಾಧೀನದಲ್ಲಿ ಅಥವಾ ನಿಯಂತ್ರಣದಲ್ಲಿ ಇಟ್ಟುಕೊಂಡಿರುವ ಯಾವನೇ ವ್ಯಕ್ತಿಯನ್ನು, ಅದನ್ನು ಕೂಡಲೇ ಸ್ವಾಧೀನ ಪಡೆಯಲು ಹಕ್ಕುಳ್ಳ ವ್ಯಕ್ತಿಗೆ ಒಪ್ಪಿಸಿಕೊಡಲು ಈ ಕೆಳಗಿನ ಯಾವುದೇ ಸಂದರ್ಭಗಳಲ್ಲಿ ನಿರ್ದಿಷ್ಟವಾಗಿ ಒತ್ತಾಯಪಡಿಸಬಹುದು.

(ಕ) ಕ್ಲೇಮು ಮಾಡಿದ ವಸ್ತುವನ್ನು ಪ್ರತಿವಾದಿಯು ವಾದಿಯ ಅಭಿಕರ್ತನಂತೆ ಅಥವಾ ನ್ಯಾಸಧಾರಿಯಂತೆ ಹೊಂದಿರುವಾಗ,

(ಖ) ಕ್ಲೇಮು ಮಾಡಿದ ವಸ್ತುವಿನ ನಷ್ಟದ ಬಗೆಗಿನ ದ್ರವ್ಯ ರೂಪದ ಪರಿಹಾರವು ವಾದಿಗೆ ಯೋಗ್ಯ ಪರಿಹಾರವಾಗದಿರುವಾಗ,

(ಗ) ಆ ವಸ್ತುವಿನ ನಷ್ಟದಿಂದ ಆದ ವಾಸ್ತವಿಕ ಹಾನಿಯನ್ನು ನಿಶ್ಚಿತಗೊಳಿಸುವುದು ಅತ್ಯಂತ ಕಷ್ಟಕರವಾಗಿರುವಾಗ,

(ಘ) ಕ್ಲೇಮು ಮಾಡಿದ ವಸ್ತುವಿನ ಸ್ವಾಧೀನವು ವಾದಿಯಿಂದ ಅಕ್ರಮವಾಗಿ ವರ್ಗಾಂತರಿಸಲಾಗಿರುವಾಗ,

ವಿವರಣೆ.—ತದ್ವಿರುದ್ಧ ರುಜುವಾತಾಗುವ ಹೊರತು ಮತ್ತು ಅವರೆಗೆ, ನ್ಯಾಯಾಲಯವು, ಈ ಪ್ರಕರಣದ (ಖ) ಖಂಡದ ಅಥವಾ (ಗ) ಖಂಡದ ಮೇರೆಗೆ ಕ್ಲೇಮು ಮಾಡಿದ ಚರಸ್ವತ್ತಿನ ಯಾವುದೇ ವಸ್ತುವಿನ ಬಗ್ಗೆ,

(ಕ) ಕ್ಲೇಮು ಮಾಡಿದ ವಸ್ತುವಿನ ನಷ್ಟದ ಬಗೆಗಿನ ದ್ರವ್ಯ ರೂಪದ ನಷ್ಟ ಪರಿಹಾರವು ವಾದಿಗೆ ಯೋಗ್ಯ ಪರಿಹಾರವಾಗುವುದಿಲ್ಲವೆಂದು, ಅಥವಾ ಸಂದರ್ಭಾನುಸಾರ

(ಖ) ಅದರ ನಷ್ಟದಿಂದ ಆದ ವಾಸ್ತವಿಕ ಹಾನಿಯನ್ನು ನಿಶ್ಚಿತಗೊಳಿಸುವುದು ಅತ್ಯಂತ ಕಷ್ಟಕರವಾಗಿದೆಯೆಂದು, ಪೂರ್ವ ಭಾವನೆ ಮಾಡತಕ್ಕದು.

## ಅಧ್ಯಾಯ-II

### ಕರಾರುಗಳ ನಿರ್ದಿಷ್ಟ ಪಾಲನೆ

9. ಕರಾರಿನ ಮೇಲೆ ಆಧಾರಿತವಾದ ಪರಿಹಾರದ ದಾವೆಗಳ ಬಗ್ಗೆ ಪ್ರತಿವಾದಗಳು.
ಇದರಲ್ಲಿ ಅನ್ಯಥಾ ಉಪಬಂಧಿಸಿರುವಂತಲ್ಲದೆ, ಈ ಅಧ್ಯಾಯದ ಮೇರೆಗೆ ಯಾವುದೇ ಕರಾರಿನ ಬಗ್ಗೆ ಪರಿಹಾರವನ್ನು ಕ್ಲೇಮು ಮಾಡಿರುವಲ್ಲಿ, ತನ್ನ ವಿರುದ್ಧ ಪರಿಹಾರವನ್ನು ಕ್ಲೇಮು ಮಾಡಲಾದ ವ್ಯಕ್ತಿಯು, ಕರಾರುಗಳಿಗೆ ಸಂಬಂಧಿಸಿದ ಯಾವುದೇ ವಿಧೇಯ ಮೇರೆಗೆ ಅವನಿಗೆ ದೊರೆಯಬಹುದಾದ ಯಾವುದೇ ಕಾರಣವನ್ನು ಪ್ರತಿವಾದ ರೂಪವಾಗಿ ತನ್ನ ವಾದವನ್ನು ಮಂಡಿಸಬಹುದು.

### ನಿರ್ದಿಷ್ಟವಾಗಿ ಜಾರಿಗೊಳಿಸಬಹುದಾದ ಕರಾರುಗಳು

10. ಕರಾರಿನ ನಿರ್ದಿಷ್ಟ ಪಾಲನೆಯನ್ನು ಜಾರಿಗೊಳಿಸಬಹುದಾದ ಸಂದರ್ಭಗಳು.—
ಈ ಅಧ್ಯಾಯದಲ್ಲಿ ಅನ್ಯಥಾ ಉಪಬಂಧಿಸಿರುವಂತಲ್ಲದೆ, ನ್ಯಾಯಾಲಯದ ವಿವೇಚನಾನುಸಾರ, ಯಾವುದೇ ಕರಾರಿನ ನಿರ್ದಿಷ್ಟ ಪಾಲನೆಯನ್ನು—

(ಕ) ಮಾಡಲು ಒಪ್ಪಿಕೊಂಡ ಯಾವುದೇ ಕಾರ್ಯವನ್ನು ಪಾಲಿಸದೇ ಇರುವುದರಿಂದ ಉಂಟಾದ ವಾಸ್ತವಿಕ ಹಾನಿಯನ್ನು ನಿಶ್ಚಯಿಸಲು ಯಾವುದೇ ಮಾಪಕವಿಲ್ಲದಿರುವಲ್ಲಿ, ಅಥವಾ

(ಖ) ಮಾಡಲು ಒಪ್ಪಿಕೊಂಡ ಕಾರ್ಯವನ್ನು, ಮಾಡದೇ ಇರುವ ಕಾರಣಕ್ಕಾಗಿ ದ್ರವ್ಯ ರೂಪದ ನಷ್ಟ ಪರಿಹಾರವು ಯೋಗ್ಯ ಪರಿಹಾರವಾಗದಿರುವಲ್ಲಿ,

—ಜಾರಿಗೊಳಿಸಬಹುದು.

ವಿವರಣೆ.—ತದ್ವಿರುದ್ಧ ರುಜುವಾತಾಗುವ ಹೊರತು ಅಥವಾ ಅವರೆಗೆ, ನ್ಯಾಯಾಲಯವು,—

(i) ಸ್ಥಿರ ಸ್ವತ್ತನ್ನು ವರ್ಗಾಂತರಿಸಲು ಮಾಡಿಕೊಂಡಿರುವ ಕರಾರಿನ ಭಂಗಕ್ಕೆ ದ್ರವ್ಯರೂಪದ ನಷ್ಟ ಪರಿಹಾರವು ಯೋಗ್ಯ ಪರಿಹಾರವಾಗುವುದಿಲ್ಲವೆಂದು, ಮತ್ತು

(ii) ಈ ಕೆಳಗಿನ ಸಂದರ್ಭಗಳನ್ನುಳಿದು, ಚಿರಸ್ವತ್ತನ್ನು ವರ್ಗಾಂತರಿಸಲು ಮಾಡಿಕೊಂಡ ಕರಾರಿನ ಭಂಗವು ಹಾಗೆ ಪರಿಹರಿಸಲ್ಪಡಬಹುದು ಎಂದು.—

(ಕ) ಸ್ವತ್ತು ವಾಣಿಜ್ಯದ ಸಾಮಾನ್ಯ ವಸ್ತುವಾಗಿಲ್ಲದಿರುವಲ್ಲಿ, ಅಥವಾ ವಾದಿಗೆ ವಿಶೇಷವಾದ ಮೌಲ್ಯ ಅಥವಾ ಹಿತಾಸಕ್ತಿಯುಳ್ಳದ್ದಾಗಿರುವಲ್ಲಿ ಅಥವಾ ಮಾರುಕಟ್ಟೆಯಲ್ಲಿ ಸುಲಭವಾಗಿ ಪಡೆಯಲಾಗದ ಸರಕುಗಳಾಗಿರುವಲ್ಲಿ,

(ಖ) ಆ ಸ್ವತ್ತನ್ನು ಪ್ರತಿವಾದಿಯು ವಾದಿಯ ಅಭಿಕರ್ತನಂತೆ ಅಥವಾ ನ್ಯಾಸಧಾರಿಯಂತೆ ಹೊಂದಿರುವಲ್ಲಿ,

—ಪೂರ್ವಭಾವನೆ ಮಾಡತಕ್ಕದ್ದು.

11. ನ್ಯಾಸಗಳಿಗೆ ಸಂಬಂಧಿಸಿದ ಕರಾರುಗಳ ನಿರ್ದಿಷ್ಟ ಪಾಲನೆಯನ್ನು ಜಾರಿಗೊಳಿಸಬಹುದಾದ ಸಂದರ್ಭಗಳು.—(1) ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿರುವಂತಲ್ಲದೆ, ಮಾಡಲು ಒಪ್ಪಿಕೊಂಡಿರುವ ಕಾರ್ಯವು ಪೂರ್ತಿಯಾಗಿ ಅಥವಾ ಭಾಗಶಃ ನ್ಯಾಸದ ಪಾಲನೆಯಲ್ಲಿರುವಾಗ, ಕರಾರಿನ ನಿರ್ದಿಷ್ಟ ಪಾಲನೆಯನ್ನು ನ್ಯಾಯಾಲಯದ ವಿವೇಚನಾನುಸಾರ ಜಾರಿಗೆ ತರಬಹುದು,

(2) ನ್ಯಾಸಧಾರಿಯು ತನ್ನ ಶಕ್ತಿಗಳನ್ನು ಮೀರಿ ಅಥವಾ ನ್ಯಾಸಕ್ಕೆ ಭಂಗವಾಗುವಂತೆ ಮಾಡಿಕೊಂಡ ಯಾವುದೇ ಕರಾರನ್ನು ನಿರ್ದಿಷ್ಟವಾಗಿ ಜಾರಿಗೊಳಿಸಲಾಗುವುದಿಲ್ಲ.

12. ಕರಾರಿನ ಭಾಗಶಃ ನಿರ್ದಿಷ್ಟ ಸಾಧನೆ.—(1) ಈ ಪ್ರಕರಣದಲ್ಲಿ ಇನ್ನುಮುಂದೆ ಅನ್ಯಥಾ ಉಪಬಂಧಿಸಿರುವಂತಲ್ಲದೆ, ನ್ಯಾಯಾಲಯವು ಕರಾರಿನ ಭಾಗಶಃ ನಿರ್ದಿಷ್ಟ ಪಾಲನೆಯನ್ನು ನಿದೇಶಿಸತಕ್ಕದಲ್ಲ.

(2) ಕರಾರಿನ ಒಂದು ಪಕ್ಷವು ಅದರಲ್ಲಿ ತನ್ನ ಭಾಗವನ್ನು ಪೂರ್ತಿಯಾಗಿ ಪಾಲಿಸಲು ಅಸಮರ್ಥವಿರುವಲ್ಲಿ' ಆದರೆ ಹಾಗೆ ಪಾಲಿಸದೆ ಬಿಡಬೇಕಾಗಿರುವ ಭಾಗವು ಇಡೀ ಮೌಲ್ಯದ ಒಂದು ಸಣ್ಣ ಭಾಗವಾಗಿದ್ದು, ಅದಕ್ಕೆ ದ್ರವ್ಯ ರೂಪದ ನಷ್ಟ ಪರಿಹಾರಕ್ಕೆ ಅವಕಾಶವಿದ್ದರೆ, ನ್ಯಾಯಾಲಯವು ಆ ಯಾವುದೇ ಪಕ್ಷದವರ ದಾವೆಯಲ್ಲಿ, ಕರಾರಿನ ಎಷ್ಟು ಭಾಗವನ್ನು ಪಾಲಿಸುವುದು ಸಾಧ್ಯವೋ ಅಷ್ಟರಮಟ್ಟಿಗೆ ನಿರ್ದಿಷ್ಟ ಪಾಲನೆಗೆ ನಿದೇಶಿಸಬಹುದು, ಮತ್ತು ಉಳಿದ ಭಾಗಕ್ಕಾಗಿ ದ್ರವ್ಯ ರೂಪದಲ್ಲಿ ನಷ್ಟ ಪರಿಹಾರ ಕೊಡಲು ಆದೇಶಿಸಬಹುದು.

(3) ಕರಾರಿನ ಒಬ್ಬ ಪಕ್ಷಕಾರನು ತನ್ನ ಭಾಗವನ್ನು ಪೂರ್ತಿಯಾಗಿ ಪಾಲಿಸಲು ಅಸಮರ್ಥನಾಗಿರುವಲ್ಲಿ, ಮತ್ತು ಪಾಲಿಸದೇ ಬಿಡಬೇಕಾಗಿರುವ ಭಾಗವು—

(ಕ) ದ್ರವ್ಯ ರೂಪದಲ್ಲಿ ನಷ್ಟ ಪರಿಹಾರಕ್ಕೆ ಅವಕಾಶವಿದ್ದರೂ ಇಡೀ ಕರಾರಿನ ಗಮನಾರ್ಹ ಭಾಗವಾಗಿದ್ದರೆ, ಅಥವಾ

(ಖ) ದ್ರವ್ಯ ರೂಪದಲ್ಲಿ ನಷ್ಟ ಪರಿಹಾರಕ್ಕೆ ಅವಕಾಶವಿರದಿದ್ದರೆ.—
ಅವನು ನಿರ್ದಿಷ್ಟ ಪಾಲನೆಗಾಗಿ ಡಿಕ್ರಿಯನ್ನು ಪಡೆದುಕೊಳ್ಳಲು ಹಕ್ಕುಳ್ಳವನಾಗಿರುವುದಿಲ್ಲ, ಆದರೆ, ನ್ಯಾಯಾಲಯವು ಬೇರೆ ಪಕ್ಷಕಾರನ ದಾವೆಯಲ್ಲಿ, ಆ ಇತರ ಪಕ್ಷಕಾರನು.—

(i) (ಕ) ಖಂಡಕ್ಕೆ ಒಳಪಡುವ ಸಂದರ್ಭದಲ್ಲಿ ಇಡೀ ಕರಾರಿಗೆ ಒಪ್ಪಿಕೊಂಡ ಪ್ರತಿಫಲದಲ್ಲಿ ಪಾಲಿಸದೇ ಬಿಡಬೇಕಾಗಿರುವ ಭಾಗದಷ್ಟರ ಪ್ರತಿಫಲವನ್ನು ಕಳೆದು ಮತ್ತು (ಖ) ಖಂಡಕ್ಕೆ ಒಳಪಡುವ ಸಂದರ್ಭದಲ್ಲಿ ಇಡೀ ಕರಾರಿನ ಪ್ರತಿಫಲದಲ್ಲಿ ಏನೂ ಕಡಿಮೆ ಇಲ್ಲದಂತೆಯೇ ಸಂದಾಯ ಮಾಡಿದರೆ ಅಥವಾ ಮಾಡಿಯಾಗಿದ್ದರೆ, ಮತ್ತು

(ii) ಎರಡೂ ಸಂದರ್ಭಗಳಲ್ಲಿ, ಕರಾರಿನ ಉಳಿದ ಭಾಗದ ಪಾಲನೆಯ ಬಗ್ಗೆ ಎಲ್ಲ ಕ್ಲೇಮುಗಳನ್ನೂ ಮತ್ತು ಪ್ರತಿವಾದಿಯ ತಪ್ಪಿನಿಂದಾಗಿ ತನಗೊದಗಿದ ಕೊರತೆ ಅಥವಾ ನಷ್ಟ ಅಥವಾ ಹಾನಿಯ ಬಗ್ಗೆ ನಷ್ಟ ಪರಿಹಾರದ ಎಲ್ಲ ಅಧಿಕಾರವನ್ನೂ ಬಿಟ್ಟುಕೊಟ್ಟರೆ, ಹಾಗೆ ತಪ್ಪಿದ ಪಕ್ಷಕಾರನು ತನ್ನ ಭಾಗದ ಕರಾರಿನ ಎಷ್ಟು ಭಾಗವನ್ನು ಪಾಲಿಸಲು ಸಾಧ್ಯವೋ ಅಷ್ಟನ್ನು ನಿರ್ದಿಷ್ಟವಾಗಿ ಪಾಲಿಸಲು ಅವನಿಗೆ ನಿದೇಶಿಸಬಹುದು.

(4) ಕರಾರಿನ ಒಂದು ಭಾಗವನ್ನು ಅದರ ಮಟ್ಟಿಗೆ ತೆಗೆದುಕೊಂಡಾಗ, ಅದು ನಿರ್ದಿಷ್ಟವಾಗಿ ಪಾಲಿಸಲು ಸಾಧ್ಯವೂ ಮತ್ತು ಪಾಲಿಸತಕ್ಕದ್ದೂ ಆಗಿದ್ದು ನಿರ್ದಿಷ್ಟವಾಗಿ ಪಾಲಿಸಲು ಸಾಧ್ಯವಾಗದ ಮತ್ತು ಪಾಲಿಸತಕ್ಕದ್ದಾಗಿರದ ಅದೇ ಕರಾರಿನ ಮತ್ತೊಂದು ಭಾಗದಿಂದ ಪ್ರತ್ಯೇಕವಾದ ಮತ್ತು ಸ್ವತಂತ್ರವಾದ ಆಧಾರದ ಮೇಲೆ ಇರುವಾಗ, ನ್ಯಾಯಾಲಯವು, ಮೊದಲಿನ ಭಾಗದ ನಿರ್ದಿಷ್ಟ ಪಾಲನೆಗಾಗಿ ನಿದೇಶಿಸಬಹುದು.

ವಿವರಣೆ.—ಈ ಪ್ರಕರಣದ ಉದ್ದೇಶಗಳಿಗಾಗಿ ಕರಾರು ಮಾಡುವ ತಾರೀಖಿನಂದು ಇದ್ದ ವಸ್ತು ವಿಷಯದ ಭಾಗವು ಅದನ್ನು ಪಾಲಿಸುವ ಕಾಲದಲ್ಲಿ ಇಲ್ಲದಿದ್ದರೆ ಕರಾರಿನ ಪಕ್ಷಕಾರನು ಅದರಲ್ಲಿನ ತನ್ನ ಭಾಗವನ್ನು ಪೂರ್ತಿಯಾಗಿ ಪಾಲಿಸಲು ಅಸಮರ್ಥನಾಗಿದ್ದಾನೆಂದು ಭಾವಿಸತಕ್ಕದ್ದು.

13. ಹಕ್ಕು ಇಲ್ಲದ ಅಥವಾ ಅಪೂರ್ಣ ಹಕ್ಕುಳ್ಳ ವ್ಯಕ್ತಿಗೆ ವಿರುದ್ಧವಾಗಿ ಕೊಂಡುಕೊಳ್ಳುವವನ ಅಥವಾ ಗುತ್ತಿಗೆದಾರನ ಅಧಿಕಾರಗಳು.—(1) ಹಕ್ಕು ಇಲ್ಲದ ಅಥವಾ ಕೇವಲ ಅಪೂರ್ಣ ಹಕ್ಕಿರುವ ಯಾವನೇ ವ್ಯಕ್ತಿಯು ಯಾವುದೇ ಸ್ಥಿರ ಸ್ವತ್ತನ್ನು ಮಾರಾಟ ಮಾಡಲು ಅಥವಾ ಗುತ್ತಿಗೆಗೆ ಕೊಡಲು ಕರಾರು ಮಾಡಿಕೊಂಡಲ್ಲಿ, ಕೊಂಡುಕೊಳ್ಳುವವನು ಅಥವಾ ಗುತ್ತಿಗೆದಾರನು (ಈ ಅಧ್ಯಾಯದ ಇತರ ಉಪಬಂಧಗಳಿಗೆ ಒಳಪಟ್ಟು) ಈ ಕೆಳಕಂಡ ಅಧಿಕಾರಗಳನ್ನು ಹೊಂದಿರತಕ್ಕದ್ದು, ಅವುಗಳು ಯಾವುವೆಂದರೆ.—

(ಕ) ಮಾರಾಟಗಾರನು ಅಥವಾ ಗುತ್ತಿಗೆಗೆ ಕೊಡುವವನು ಕರಾರಿನ ತರುವಾಯ ಆ ಸ್ವತ್ತಿನಲ್ಲಿ ಯಾವುದೇ ಹಿತಾಸಕ್ತಿಯನ್ನು ಆರ್ಜಿಸಿದರೆ, ಕೊಂಡುಕೊಂಡವನು ಅಥವಾ ಗುತ್ತಿಗೆದಾರನು ಅಂಥ ಹಿತಾಸಕ್ತಿಯಿಂದ ಆ ಕರಾರನ್ನು ಪೂರೈಸಲು ಅವನನ್ನು ಒತ್ತಾಯಪಡಿಸಬಹುದು.

(ಖ) ಆ ಹಕ್ಕನ್ನು ಮಾನ್ಯಗೊಳಿಸಲು ಇತರ ವ್ಯಕ್ತಿಗಳ ಸಮ್ಮತಿಯು ಅವಶ್ಯವಾಗಿದ್ದಲ್ಲಿ, ಮತ್ತು ಮಾರಾಟಗಾರನ ಅಥವಾ ಗುತ್ತಿಗೆ ಕೊಡುವವನ ವಿನಂತಿಯ ಮೇಲೆ ಅವರು ತಮ್ಮ ಸಮ್ಮತಿಯನ್ನು ಕೊಡಲು ಬದ್ಧರಾಗಿರುವಲ್ಲಿ, ಕೊಂಡುಕೊಂಡವನು ಅಥವಾ ಗುತ್ತಿಗೆದಾರನು ಅಂಥ ಸಮ್ಮತಿಯನ್ನು ಪಡೆದುಕೊಳ್ಳಲು ಅವನನ್ನು ಒತ್ತಾಯಪಡಿಸಬಹುದು, ಮತ್ತು ಆ ಹಕ್ಕನ್ನು ಮಾನ್ಯಗೊಳಿಸಲು ಇತರ ವ್ಯಕ್ತಿಗಳು ವರ್ಗಾವಣೆ ಮಾಡುವುದು ಅವಶ್ಯವಾಗಿರುವಲ್ಲಿ ಮತ್ತು ಅವರು ಮಾರಾಟಗಾರನ ಅಥವಾ ಗುತ್ತಿಗೆ ಕೊಡುವವನ ವಿನಂತಿಯ ಮೇಲೆ, ವರ್ಗಾವಣೆ ಮಾಡಲು ಬದ್ಧರಾಗಿರುವಲ್ಲಿ, ಕೊಂಡುಕೊಂಡವನು ಅಥವಾ ಗುತ್ತಿಗೆದಾರನು ಅಂಥ ವರ್ಗಾವಣೆಯನ್ನು ಪಡೆದುಕೊಳ್ಳುವಂತೆ ಅವನನ್ನು ಒತ್ತಾಯಪಡಿಸಬಹುದು.

(ಗ) ಮಾರಾಟಗಾರನು ಋಣ ಭಾರ ಇಲ್ಲದೆ ಸ್ವತ್ತನ್ನು ಮಾರುವುದಾಗಿ ಹೇಳುತ್ತಿದ್ದು, ಆದರೆ, ಆ ಸ್ವತ್ತು ಕೊಳ್ಳುವ ಹಣಕ್ಕಿಂತ ಹೆಚ್ಚಾಗದಷ್ಟು ಮೊಬಲಗಿಗೆ ಅಡಮಾನವಾಗಿರುವಲ್ಲಿ, ಮತ್ತು ವಾಸ್ತವವಾಗಿ ಮಾರಾಟಗಾರನಿಗೆ ಅದರ ವಿಮೋಚನಾಧಿಕಾರ

ಮಾತ್ರ ಇದ್ದರೆ, ಕೊಂಡುಕೊಳ್ಳುವವನು ಅದನ್ನು ಅಡಮಾನದಿಂದ ವಿಮೋಚನೆ ಮಾಡುವಂತೆ ಮತ್ತು ಅಡಮಾನ ಪಡೆದವನಿಂದ ಒಂದು ಮಾನ್ಯವಾದ ಉನ್ಮುಕ್ತಿಯನ್ನು ಮತ್ತು ಅವಶ್ಯವಿರುವಲ್ಲಿ, ಒಂದು ವರ್ಗಾವಣೆಯನ್ನೂ ಪಡೆಯುವಂತೆ, ಅವನನ್ನು ಒತ್ತಾಯಪಡಿಸಬಹುದು.

(ಘ) ಮಾರಾಟಗಾರನು ಅಥವಾ ಗುತ್ತಿಗೆಗೆ ಕೊಡುವವನು ಕರಾರಿನ ನಿರ್ದಿಷ್ಟ ಪಾಲನೆಗಾಗಿ ದಾವೆ ಹೂಡಿದ್ದು, ಮತ್ತು ಆ ದಾವೆಯು ಅವನ ಹಕ್ಕಿಲ್ಲದಿರುವಿಕೆಯ ಅಥವಾ ಅವನ ಅಪೂರ್ಣ ಹಕ್ಕಿನ ಕಾರಣದ ಮೇಲೆ ವಜಾ ಆಗಿದ್ದರೆ ಪ್ರತಿವಾದಿಯು ತನ್ನ ಠೇವಣಿ ಏನಾದರೂ ಇದ್ದರೆ, ಅದರ ಮೇಲೆ ಬಡ್ಡಿ ಸಹಿತವಾಗಿ ಅದನ್ನೂ ದಾವೆಯ ತನ್ನ ಖರ್ಚುಗಳನ್ನೂ ವಾಪಸು ಪಡೆಯಲು ಮತ್ತು ಕರಾರಿನ ವಸ್ತು ವಿಷಯವಾಗಿರುವ ಸ್ವತ್ತಿನಲ್ಲಿ ಮಾರಾಟಗಾರನಿಗೆ ಅಥವಾ ಗುತ್ತಿಗೆಗೆ ಕೊಟ್ಟವನಿಗೆ ಇರಬಹುದಾದ ಹಿತಾಸಕ್ತಿಯ ಮೇಲೆ ಅಂಥ ಠೇವಣಿ, ಬಡ್ಡಿ ಮತ್ತು ಖರ್ಚುಗಳು, ಇವುಗಳ ಬಗ್ಗೆ ಧಾರಣಾಧಿಕಾರವನ್ನು ಹೊಂದಿರಲು, ಅಧಿಕಾರವುಳ್ಳವನಾಗಿರುವನು.

(2) (1)ನೆಯ ಒಳಪ್ರಕರಣದ ಉಪಬಂಧಗಳು, ಸಾಧ್ಯವಿರುವ ಮಟ್ಟಿಗೆ, ಚರ ಸ್ವತ್ತಿನ ಮಾರಾಟ ಅಥವಾ ಬಾಡಿಗೆಯ ಕರಾರುಗಳಿಗೂ ಕೂಡ ಅನ್ವಯಿಸತಕ್ಕದು,

## ನಿರ್ದಿಷ್ಟವಾಗಿ ಜಾರಿಗೆ ತರಲಾಗದ ಕರಾರುಗಳು.

14. ನಿರ್ದಿಷ್ಟವಾಗಿ ಜಾರಿಗೆ ತರಲಾಗದ ಕರಾರುಗಳು.–(1) ಈ ಕೆಳಗಿನ ಕರಾರುಗಳನ್ನು ನಿರ್ದಿಷ್ಟವಾಗಿ ಜಾರಿಗೆ ತರಲಾಗುವುದಿಲ್ಲ, ಎಂದರೆ,—

(ಕ) ಯಾವ ಕರಾರಿನ ಪಾಲನೆಯಾಗದಿದ್ದರೆ ದ್ರವ್ಯ ರೂಪದ ನಷ್ಟ ಪರಿಹಾರವು ಸಾಕಷ್ಟು ಪರಿಹಾರವಾಗುತ್ತದೆಯೋ ಅಂಥ ಕರಾರು,

(ಖ) ನ್ಯಾಯಾಲಯವು ಅದರ ಮುಖ್ಯಾಂಶಗಳ ನಿರ್ದಿಷ್ಟ ಪಾಲನೆಯನ್ನು ಜಾರಿಗೊಳಿಸಲಾಗದಂಥ ಅತಿಸೂಕ್ತ ಅಥವಾ ಬಹು ವಿವರಗಳಿಂದ ಕೂಡಿರುವ ಅಥವಾ ಪಕ್ಷಕಾರರ ವೈಯಕ್ತಿಕ ಅರ್ಹತೆಗಳ ಅಥವಾ ಇಚ್ಛೆಯ ಮೇಲೆ ಅವಲಂಬಿತವಾಗಿರುವ ಅಥವಾ ಅನ್ಯಥಾ ಅಂಥ ಸ್ವರೂಪದ್ದಾಗಿರುವ ಕರಾರು,

(ಗ) ಸ್ವಭಾವತಃ ಕೊನೆಗೊಳಿಸಬಹುದಾದ ಕರಾರು,

(ಘ) ಯಾವ ಕರಾರಿನ ಪಾಲನೆಯು ನ್ಯಾಯಾಲಯವು ಮೇಲ್ವಿಚಾರಣೆ ಮಾಡಲಾರದಷ್ಟು ನಿರಂತರ ಕರ್ತವ್ಯ ಪಾಲನೆಯನ್ನೊಳಗೊಳ್ಳುತ್ತದೆಯೋ ಅಂಥ ಕರಾರು,

(2) ಮಧ್ಯಸ್ಥ ನಿರ್ಣಯ ಅಧಿನಿಯಮ, 1940 (1940ರ10) ರಲ್ಲಿ ಉಪಬಂಧಿಸಿದುದನ್ನುಳಿದು, ಸದ್ಯದ ಅಥವಾ ಮುಂದಿನ ಯಾವುವೇ ವಿವಾದಗಳನ್ನು ಮಧ್ಯಸ್ಥಿತಿಗೆ ಒಪ್ಪಿಸುವ ಸಂಬಂಧದ ಯಾವುದೇ ಕರಾರನ್ನು ನಿರ್ದಿಷ್ಟವಾಗಿ ಜಾರಿಗೆ ತರತಕ್ಕದಲ್ಲ ಆದರೆ (ಉಕ್ತ ಅಧಿನಿಯಮದ ಉಪಬಂಧಗಳು ಅನ್ವಯಿಸುವ ಮಧ್ಯಸ್ಥಿಕೆಯ ಒಪ್ಪಂದವಲ್ಲದ) ಅಂಥ ಕರಾರನ್ನು ಮಾಡಿಕೊಂಡ ಮತ್ತು ಅದನ್ನು ಪಾಲಿಸಲು ನಿರಾಕರಿಸುವ ಯಾವನೇ ವ್ಯಕ್ತಿಯು, ತಾನು ಹಾಗೆ ಒಪ್ಪಿಸುವುದಾಗಿ ಕರಾರು ಮಾಡಿಕೊಂಡ ಯಾವುದೇ ವಿಷಯದ ಬಗ್ಗೆ ದಾವೆ ಹೂಡಿದಲ್ಲಿ, ಅಂಥ ಕರಾರಿನ ಅಸ್ತಿತ್ವವು ಆ ದಾವೆಗೆ ಪ್ರತಿಬಂಧಕವಾಗತಕ್ಕದು.

(3) (1)ನೆಯ ಒಳಪ್ರಕರಣದ (ಕ) ಖಂಡದಲ್ಲಿ ಅಥವಾ (ಗ) ಖಂಡದಲ್ಲಿ ಅಥವಾ (ಘ) ಖಂಡದಲ್ಲಿ ಏನೇ ಇದ್ದರೂ, ನ್ಯಾಯಾಲಯವು ಈ ಕೆಳಕಂಡ ಸಂದರ್ಭಗಳಲ್ಲಿ ನಿರ್ದಿಷ್ಟಪಾಲನೆಯನ್ನು ಜಾರಿಗೊಳಿಸಬಹುದು,—

(ಕ) ದಾವೆಯು:—

(i) ಸಾಲಗಾರನು ಕೂಡಲೇ ಮರು ಸಂದಾಯ ಮಾಡಲು ಇಷ್ಟಪಡದ ಯಾವುದೇ ಸಾಲದ ಮರು ಸಂದಾಯವನ್ನು ಭದ್ರ ಪಡಿಸಿಕೊಳ್ಳುವುದಕ್ಕಾಗಿ ಅಡಮಾನ ಪತ್ರವನ್ನು ಬರೆದು ಕೊಡಲು ಅಥವಾ ಯಾವುದೇ ಇತರ ಭದ್ರತೆಯನ್ನು ಒದಗಿಸಲು ಮಾಡಿಕೊಂಡ ಕರಾರನ್ನು ಜಾರಿಗೊಳಿಸುವ ಬಗ್ಗೆ ಇದ್ದಲ್ಲಿ ;

ಪರಂತು, ಸಾಲದ ಸ್ವಲ್ಪ ಭಾಗ ಮಾತ್ರ ಸಾಲಗಾರನಿಗೆ ಕೊಟ್ಟಿದ್ದು, ಕರಾರಿನ ನಿಬಂಧನೆಗಳ ಪ್ರಕಾರ ಸಾಲದ ಉಳಿದ ಭಾಗವನ್ನೆಲ್ಲ ಕೊಡಲು ಸಾಲ ಕೊಡುವವನು ಸಿದ್ಧನಿದ್ದರೆ ; ಅಥವಾ

(ii) ಯಾವುದೇ ಕಂಪನಿಯ ಡಿಬೆಂಚರುಗಳನ್ನು ತೆಗೆದುಕೊಳ್ಳಲು ಮತ್ತು ಅದಕ್ಕಾಗಿ ಸಂದಾಯ ಮಾಡಲು ಮಾಡಿಕೊಂಡ ಕರಾರನ್ನು ಜಾರಿಗೊಳಿಸುವ ಬಗ್ಗೆ ಇದ್ದಲ್ಲಿ;

(ಖ) ದಾವೆಯು,—

(i) ಪಕ್ಷಕಾರರು ಪಾಲುಗಾರಿಕೆಯ ವ್ಯವಹಾರವನ್ನು ಆರಂಭಿಸಿದ್ದು, ಆ ಪಾಲುಗಾರಿಕೆಯ ಬಗ್ಗೆ ಒಂದು ವಿಧ್ಯುಕ್ತ ದಸ್ತಾವೇಜನ್ನು ಬರೆದುಕೊಡುವ ಬಗ್ಗೆ ಇದ್ದಲ್ಲಿ ಅಥವಾ

(ii) ಫರ್ಮಿನಲ್ಲಿ ಪಾಲುಗಾರನ ಪಾಲನ್ನು ಕೊಂಡುಕೊಳ್ಳುವ ಬಗ್ಗೆ ಇದ್ದಲ್ಲಿ ;

(ಗ) ದಾವೆಯು ಯಾವುದೇ ಕಟ್ಟಡವನ್ನು ಕಟ್ಟುವ ಅಥವಾ ಭೂಮಿಯ ಮೇಲೆ ಇತರ ಯಾವುದೇ ಕಾಮಗಾರಿಯನ್ನು ಮಾಡಿಸುವ ಕರಾರನ್ನು ಜಾರಿಗೊಳಿಸುವ ಬಗ್ಗೆ ಇದ್ದಲ್ಲಿ ;

ಪರಂತು, ಈ ಕೆಳಗಿನ ಷರತ್ತುಗಳು ಪೂರೈಸಲ್ಪಟ್ಟಿರಬೇಕು : ಅವು ಯಾವುವೆಂದರೆ :—

(i) ನ್ಯಾಯಾಲಯವು ಆ ಕಟ್ಟಡದ ಅಥವಾ ಕಾಮಗಾರಿಯ ಸ್ವರೂಪವನ್ನು ನಿಷ್ಕೃಷ್ಟವಾಗಿ ನಿರ್ಧರಿಸಲು ಅನುಕೂಲವಾಗುವಷ್ಟು ಖಚಿತವಾಗಿ ಆ ಕಟ್ಟಡದ ಅಥವಾ ಕಾಮಗಾರಿಯ ವಿವರವು ಆ ಕರಾರಿನಲ್ಲಿ ವಿವರಿಸಲ್ಪಟ್ಟಿರಬೇಕು ;

(ii) ವಾದಿಯು ಆ ಕರಾರಿನ ಪಾಲನೆಯಲ್ಲಿ ಸಾರಭೂತವಾದ ಹಿತಾಸಕ್ತಿಯನ್ನು ಹೊಂದಿರಬೇಕು ಮತ್ತು ಅಂಥ ಹಿತಾಸಕ್ತಿಯು ಕರಾರಿನ ಪಾಲನೆಯಾಗದಿದ್ದರೆ ದ್ರವ್ಯ ರೂಪದಲ್ಲಿ ನಷ್ಟ ಪರಿಹಾರ ಕೊಡುವುದು ಸಾಕಷ್ಟು ಪರಿಹಾರವೆನಿಸಲಾರದ ಸ್ವಾಭಾವದ್ದಾಗಿರಬೇಕು : ಮತ್ತು

(iii) ಪ್ರತಿವಾದಿಯು, ಯಾವ ಭೂಮಿಯ ಮೇಲೆ ಕಟ್ಟಡವನ್ನು ಕಟ್ಟಬೇಕೋ ಅಥವಾ ಕಾಮಗಾರಿಯನ್ನು ನಿರ್ವಹಿಸಬೇಕೋ ಆ ಇಡೀ ಭೂಮಿಯ ಅಥವಾ ಅದರ ಯಾವುದೇ ಭಾಗದ ಸ್ವಾಧೀನವನ್ನು ಕರಾರಿನ ಅನುಸಾರ, ಪಡೆದುಕೊಂಡಿರಬೇಕು.

## ಯಾರ ಪರವಾಗಿ ಅಥವಾ ವಿರುದ್ಧವಾಗಿ ಕರಾರುಗಳನ್ನು ನಿರ್ದಿಷ್ಟವಾಗಿ ಜಾರಿಗೊಳಿಸಬಹುದೋ ಆ ವ್ಯಕ್ತಿಗಳು

**15.** ನಿರ್ದಿಷ್ಟ ಪಾಲನೆಯನ್ನು ಯಾರು ಪಡೆಯಬಹುದು.—ಈ ಅಧ್ಯಾಯದಲ್ಲಿ ಅನ್ಯಥಾ ಉಪಬಂಧಿಸಿರುವಂತಲ್ಲದೆ ಕರಾರಿನ ನಿರ್ದಿಷ್ಟ ಪಾಲನೆಯನ್ನು.—

(ಕ) ಅದರ ಯಾವನೇ ಪಕ್ಷಕಾರನು;

(ಖ) ಅದರ ಯಾವನೇ ಪಕ್ಷಕಾರನ ಹಿತಾಸಕ್ತಿಯ ಪ್ರತಿನಿಧಿಯು ಅಥವಾ ಮೂಲಕರ್ತನು;

ಪಡೆದುಕೊಳ್ಳಬಹುದು:

ಪರಂತು, ಅಂಥ ಪಕ್ಷಕಾರನ ವಿದ್ವತ್ತು, ಕೌಶಲ, ಸಾಲ ತೀರಿಸುವ ಶಕ್ತಿ ಅಥವಾ ಅವನ ಯಾವುದೇ ವೈಯಕ್ತಿಕ ಗುಣವು ಆ ಕರಾರಿನ ಮುಖ್ಯಾಂಶವಾಗಿರುವಲ್ಲಿ, ಅಥವಾ ಅವನ ಹಿತಾಸಕ್ತಿಯನ್ನು ವರ್ಗಾವಣೆ ಮಾಡಲಾಗದೆಂದು ಕರಾರು ಉಪಬಂಧಿಸಿರುತ್ತಿರುವಲ್ಲಿ ಅಂಥ ಪಕ್ಷಕಾರನು ಕರಾರಿನಲ್ಲಿಯ ತನ್ನ ಭಾಗವನ್ನು ಈಗಾಗಲೇ ಪಾಲಿಸಿದ್ದಲ್ಲಿ ಅಥವಾ ಅವನ ಹಿತಾಸಕ್ತಿಯ ಪ್ರತಿನಿಧಿಯಿಂದ ಅಥವಾ ಮೂಲಕರ್ತನಿಂದ ಮಾಡಲಾದ ಅದರ ಪಾಲನೆಯನ್ನು ಬೇರೆ ಪಕ್ಷವು ಒಪ್ಪಿಕೊಂಡಿದ್ದ ಹೊರತು, ಅವನ ಹಿತಾಸಕ್ತಿಯ ಪ್ರತಿನಿಧಿಯು ಅಥವಾ ಮೂಲಕರ್ತನು ಆ ಕರಾರಿನ ನಿರ್ದಿಷ್ಟ ಪಾಲನೆಗೆ ಹಕ್ಕುಳ್ಳವನಾಗಿರತಕ್ಕದಲ್ಲ;

(ಗ) ಕರಾರು, ವಿವಾಹದ ಸಂಬಂಧದ ವ್ಯವಸ್ಥಾಪನೆಯಾಗಿರುವಲ್ಲಿ ಅಥವಾ ಒಂದೇ ಕುಟುಂಬದ ವ್ಯಕ್ತಿಗಳ ಪರಸ್ಪರ ಸಂದೇಹಾಸ್ಪದ ಅಧಿಕಾರಗಳ ಒಂದು ರಾಜಿಯಾಗಿರುವಲ್ಲಿ, ಆ ಮೇರೆಗೆ ಪ್ರಯೋಜನ ಹೊಂದಲು ಹಕ್ಕುಳ್ಳ ಯಾವನೇ ವ್ಯಕ್ತಿಯು ಪಡೆದುಕೊಳ್ಳಬಹುದು;

(ಘ) ಶಕ್ತಿಯ ಯುಕ್ತ ಚಲಾವಣೆಯಲ್ಲಿ ಆಜೀವ ಅನುಭೋಗದಾರನು ಕರಾರನ್ನು ಮಾಡಿಕೊಂಡಿರುವಲ್ಲಿ ಶೇಷ ಭೋಗಿಯು ಪಡೆದುಕೊಳ್ಳಬಹುದು;

(ಙ) ಒಪ್ಪಂದವು ಪೂರ್ವದ ಹಕ್ಕುದಾರನೊಡನೆ ಮಾಡಿಕೊಂಡಿರುವ ಒಡಂಬಡಿಕೆಯಾಗಿದ್ದು ಮತ್ತು ಉತ್ತರಭೋಗಿಯು ಅಂಥ ಒಡಂಬಡಿಕೆಯ ಪ್ರಯೋಜನ ಪಡೆಯಲು ಹಕ್ಕುಳ್ಳವನಾಗಿರುವಲ್ಲಿ, ಸ್ವಾಧೀನದಲ್ಲಿರುವಂಥ ಉತ್ತರಭೋಗಿಯು, ಪಡೆದುಕೊಳ್ಳಬಹುದು;

(ಚ) ಒಪ್ಪಂದವು ಅಂಥ ಒಡಂಬಡಿಕೆಯಾಗಿದ್ದು ಮತ್ತು ಉತ್ತರ ಭೋಗಿಯು ಅದರ ಪ್ರಯೋಜನದ ಹಕ್ಕುಳ್ಳವನಾಗಿದ್ದು ಮತ್ತು ಅದರ ಉಲ್ಲಂಘನೆಯಿಂದುಂಟಾಗುವ ಗಣನೀಯ ಕ್ಷತಿಯನ್ನು ಅನುಭವಿಸುವಲ್ಲಿ, ಶೇಷ-ಉತ್ತರಭೋಗಿಯು ಪಡೆದುಕೊಳ್ಳಬಹುದು;

(ಛ) ಒಂದು ಕಂಪನಿಯು ಕರಾರನ್ನು ಮಾಡಿಕೊಂಡಿದ್ದು, ಆ ತರುವಾಯ ಅದು ಮತ್ತೊಂದು ಕಂಪೆನಿಯೊಂದಿಗೆ ಸಮ್ಮಿಲಿತವಾದರೆ, ಆ ಸಮ್ಮಿಲನದಿಂದ ಉದ್ಭವಿಸುವ ಹೊಸ ಕಂಪನಿಯು, ಪಡೆದುಕೊಳ್ಳಬಹುದು;

(ಜ) ಒಂದು ಕಂಪೆನಿಯ ಪ್ರವರ್ತಕರು, ಅದು ನಿಗಮಿತವಾಗುವುದಕ್ಕೆ ಮುಂಚೆ ಆ ಕಂಪೆನಿಯ ಉದ್ದೇಶಗಳಿಗಾಗಿ ಕರಾರನ್ನು ಮಾಡಿಕೊಂಡಿರುವಾಗ, ನಿಗಮನದ ನಿಬಂಧನೆಗಳ ಪ್ರಕಾರ ಅಂಥ ಕರಾರು ಸಮರ್ಥಿಸಲ್ಪಟ್ಟಿರುವಲ್ಲಿ, ಆ ಕಂಪೆನಿಯು ಪಡೆದುಕೊಳ್ಳಬಹುದು;

ಪರಂತು, ಕಂಪೆನಿಯು ಅಂಥ ಕರಾರನ್ನು ಒಪ್ಪಿಕೊಂಡಿರಬೇಕು ಮತ್ತು ಅಂಥ ಒಪ್ಪಿಗೆಯನ್ನು ಕರಾರಿನ ಇನ್ನೊಬ್ಬ ಪಕ್ಷಕಾರನಿಗೆ ತಿಳಿಸಿರಬೇಕು.

16. ಪರಿಹಾರಕ್ಕೆ ವೈಯಕ್ತಿಕ ಪ್ರತಿಬಂಧ.—ಒಂದು ಕರಾರಿನ ನಿರ್ದಿಷ್ಟ ಪಾಲನೆಯನ್ನು,

(ಕ) ಅದರ ಉಲ್ಲಂಘನೆಗೆ ಪರಿಹಾರ ಪಡೆಯಲು ಹಕ್ಕಿಲ್ಲದಿರುವ ; ಅಥವಾ

(ಖ) ಕರಾರಿನಂತೆ ತಾನು ಪಾಲಿಸಬೇಕಾದ ತನ್ನ ಭಾಗವನ್ನು ಪಾಲಿಸಲು ಅಸಮರ್ಥನಾದ ಅಥವಾ ಅದರ ಯಾವುದಾದರೂ ಅತ್ಯಾವಶ್ಯಕ ನಿಬಂಧನೆಯನ್ನು ಉಲ್ಲಂಘಿಸುವ, ಅಥವಾ ಅಂಥ ಕರಾರಿನ ಬಗ್ಗೆ ಮೋಸದಿಂದ ವರ್ತಿಸುವ ಅಥವಾ ಅಂಥ ಕರಾರಿನಿಂದ ಸ್ಥಾಪಿಸಬೇಕೆಂದು ಉದ್ದೇಶಿಸಿರುವ ಸಂಬಂಧಕ್ಕೆ ಬುದ್ಧಿಪೂರ್ವಕವಾಗಿ, ವಿರುದ್ಧವಾಗಿ ಅಥವಾ ವಿಧ್ವಂಸಕವಾಗಿ ವರ್ತಿಸುವ ; ಅಥವಾ

(ಗ) ಪ್ರತಿವಾದಿಯು ನಿರೋಧಿಸಿದ ಅಥವಾ ಬಿಟ್ಟುಕೊಟ್ಟ ನಿಬಂಧನೆಗಳ ಪಾಲನೆಯನ್ನುಳಿದು, ತಾನು ಪಾಲಿಸಬೇಕಾದ ಕರಾರಿನ ಅತ್ಯಾವಶ್ಯಕ ನಿಬಂಧನೆಗಳನ್ನು ಪಾಲಿಸಿರುವನೆಂದು ಅಥವಾ ಪಾಲಿಸಲು ಸದಾ ಸಿದ್ಧನೂ ಇಷ್ಟವುಳ್ಳವನೂ ಆಗಿರುವನೆಂದು ದೃಢವಾಗಿ ಹೇಳಲು ಮತ್ತು ರುಜುವಾತು ಪಡಿಸಲು ತಪ್ಪುವ ;
ವ್ಯಕ್ತಿಯ ಪರವಾಗಿ ಜಾರಿಗೊಳಿಸಲಾಗಶಕ್ಯದಲ್ಲ.

ವಿವರಣೆ.—(ಗ) ಖಂಡದ ಉದ್ದೇಶಗಳಿಗಾಗಿ,

(i) ಕರಾರಿನ ಪ್ರಕಾರ ಹಣ ಸಂದಾಯವಾಗಬೇಕಾಗಿರುವಲ್ಲಿ, ನ್ಯಾಯಾಲಯವು ಹಾಗೆಂದು ನಿದೇಶಿಸಿದ ಹೊರತು, ವಾದಿಯು, ವಾಸ್ತವಿಕವಾಗಿ ಯಾವುದೇ ಹಣವನ್ನು ಪ್ರತಿವಾದಿಗೆ ನೀಡುವುದು ಅಥವಾ ನ್ಯಾಯಾಲಯದಲ್ಲಿ ಠೇವಣಿ ಮಾಡುವುದು ಅಗತ್ಯವಾಗಿರುವುದಿಲ್ಲ;

(ii) ವಾದಿಯು, ಕರಾರಿನ ನಿಜವಾದ ಅರ್ಥಕ್ಕನುಗುಣವಾಗಿ, ಕರಾರನ್ನು ಪಾಲಿಸಿರುವುದಾಗಿ ಅಥವಾ ಪಾಲಿಸಲು ಸಿದ್ಧನೂ, ಇಷ್ಟವುಳ್ಳವನೂ ಆಗಿರುವುದಾಗಿ ದೃಢವಾಗಿ ಹೇಳಬೇಕು.

17. ಹಕ್ಕಿಲ್ಲದವನು ಸ್ವತ್ತನ್ನು ಮಾರಾಟ ಮಾಡಲು ಅಥವಾ ಗುತ್ತಿಗೆಗೆ ಕೊಡಲು ಮಾಡಿಕೊಂಡ ಕರಾರನ್ನು ನಿರ್ದಿಷ್ಟವಾಗಿ ಜಾರಿಗೊಳಿಸಲಾಗುವುದಿಲ್ಲ.—
(1) ಯಾವುದೇ ಸ್ಥಿರಸ್ವತ್ತನ್ನು ಮಾರಾಟ ಮಾಡುವುದಾಗಿ ಅಥವಾ ಗುತ್ತಿಗೆಗೆ ಕೊಡುವುದಾಗಿ ಮಾಡಿಕೊಂಡ ಕರಾರನ್ನು,—

(ಕ) ಸ್ವತ್ತಿನ ಬಗ್ಗೆ ತನಗೆ ಯಾವುದೇ ಹಕ್ಕಿಲ್ಲವೆಂದು ಗೊತ್ತಿದ್ದೂ, ಆ ಸ್ವತ್ತನ್ನು ಮಾರಾಟ ಮಾಡಲು ಅಥವಾ ಗುತ್ತಿಗೆಗೆ ಕೊಡಲು ಕರಾರು ಮಾಡಿಕೊಂಡ ;

(ಖ) ಆ ಸ್ವತ್ತಿಗೆ ತನಗೆ ಸರಿಯಾದ ಹಕ್ಕಿದೆಯೆಂದು ನಂಬಿ ಕರಾರು ಮಾಡಿಕೊಂಡಿದ್ದು, ಪಕ್ಷಕಾರರು ಅಥವಾ ನ್ಯಾಯಾಲಯವು ನಿಗದಿ ಮಾಡಿದ ಕಾಲದಲ್ಲಿ ಮಾರಾಟ ಅಥವಾ ಗುತ್ತಿಗೆಯನ್ನು ಪೂರ್ತಿಗೊಳಿಸಲು ಕೊಂಡು ಕೊಳ್ಳುವವನಿಗೆ ಅಥವಾ ಗುತ್ತಿಗೆದಾರನಿಗೆ ಸಕಾರಣವಾದ ಸಂದೇಹದಿಂದ ಮುಕ್ತವಾದ ಹಕ್ಕನ್ನು ಕೊಡಲು ಸಾಧ್ಯವಾಗದ ;
ಮಾರಾಟಗಾರನ ಅಥವಾ ಗುತ್ತಿಗೆಗೆ ಕೊಡುವವನ ಪರವಾಗಿ ನಿರ್ದಿಷ್ಟವಾಗಿ ಜಾರಿಗೊಳಿಸಲಾಗದು.

(2) (1)ನೆಯ ಒಳಪ್ರಕರಣದ ಉಪಬಂಧಗಳು, ಸಾಧ್ಯವಿರುವ ಮಟ್ಟಿಗೆ, ಚರಸ್ವತ್ತಿನ ಮಾರಾಟ ಅಥವಾ ಬಾಡಿಗೆಯ ಕರಾರುಗಳಿಗೂ ಅನ್ವಯಿಸತಕ್ಕುದು.

18 ವ್ಯತ್ಯಾಸವಿದ್ದ ಹೊರತು ಜಾರಿಗೊಳಿಸಲಾಗದಿರುವುದು.—ಪ್ರತಿವಾದಿಯು ವ್ಯತ್ಯಾಸವನ್ನು ಮುಂದಿಡುತ್ತಿರುವ ಯಾವುದೇ ಲಿಖಿತ ರೂಪವಾದ ಕರಾರಿನ ನಿರ್ದಿಷ್ಟ ಪಾಲನೆಯನ್ನು ವಾದಿಯು ಕೇಳುತ್ತಿರುವಲ್ಲಿ, ಈ ಕೆಳಗಿನ ಸಂದರ್ಭಗಳಲ್ಲಿ ಹಾಗೆ ಮುಂದಿಟ್ಟ ವ್ಯತ್ಯಾಸಗಳಿಲ್ಲದೆ, ವಾದಿಯು ತಾನು ಕೇಳಿದ ನಿರ್ದಿಷ್ಟ ಪಾಲನೆಯನ್ನು ಪಡೆಯಲಾಗುವುದಿಲ್ಲ, ಎಂದರೆ.—

(ಕ) ನಿರ್ದಿಷ್ಟ ಪಾಲನೆಯನ್ನು ಕೇಳುತ್ತಿರುವ ಲಿಖಿತ ಕರಾರು ಮೋಸದಿಂದಾಗಿ, ಸಂಗತಿಯ ತಪ್ಪಿನಿಂದಾಗಿ ಅಥವಾ ತಪ್ಪು ನಿರೂಪಣೆಯಿಂದಾಗಿ, ಅದರ ನಿಬಂಧನೆಗಳಲ್ಲಿ ಅಥವಾ ಪರಿಣಾಮದಲ್ಲಿ ಪಕ್ಷಕಾರರು ಪರಸ್ಪರ ಒಪ್ಪಿಕೊಂಡಿರುವುದಕ್ಕೆ ಭಿನ್ನವಾಗಿದ್ದಲ್ಲಿ, ಅಥವಾ ಪಕ್ಷಕಾರರು ಪರಸ್ಪರ ಒಪ್ಪಿಕೊಂಡ ಯಾವ ನಿಬಂಧನೆಗಳ ಆಧಾರದ ಮೇಲೆ ಪ್ರತಿವಾದಿಯು ಆ ಕರಾರನ್ನು ಮಾಡಿಕೊಂಡನೋ ಆ ಎಲ್ಲ ನಿಬಂಧನೆಗಳನ್ನು ಒಳಗೊಂಡಿರದಿದ್ದಲ್ಲಿ;

(ಖ) ಯಾವುದೇ ಒಂದು ವಿಧಿವಿಹಿತ ಫಲಿತಾಂಶವನ್ನುಂಟು ಮಾಡುವುದು ಪಕ್ಷಕಾರರ ಉದ್ದೇಶವಾಗಿದ್ದು, ರಚಿತವಾಗಿರುವ ಆ ಕರಾರು ಅದನ್ನು ಸಾಧಿಸುವಂತೆ ಪ್ರಕಲ್ಪಿತವಾಗಿರದಿದ್ದಲ್ಲಿ

(ಗ) ಪಕ್ಷಕಾರರು, ಕರಾರನ್ನು ಬರೆದುಕೊಟ್ಟ ಬಳಿಕ, ಅದರ ನಿಬಂಧನೆಗಳನ್ನು ವ್ಯತ್ಯಾಸಗೊಳಿಸಿರುವಲ್ಲಿ

19 ಪಕ್ಷಕಾರರ ಮತ್ತು ಆನಂತರದ ಹಕ್ಕಿನಿಂದ ಅವರ ಮೂಲಕ ಕ್ಲೇಮು ಮಾಡುವ ವ್ಯಕ್ತಿಗಳ ವಿರುದ್ಧ ಪರಿಹಾರ.—ಈ ಅಧ್ಯಾಯದಲ್ಲಿ ಅನ್ಯಥಾ ಉಪಬಂಧಿಸಿರುವಂತಲ್ಲದೆ, ಕರಾರಿನ ನಿರ್ದಿಷ್ಟ ಪಾಲನೆಯನ್ನು—

(ಕ) ಅದರ ಪಕ್ಷಕಾರರಲ್ಲಿ ಯಾರೊಬ್ಬರ ವಿರುದ್ಧ

(ಖ) ಮೂಲ ಕರಾರನ್ನು ಅರಿಯದೆ ಸದ್ಭಾವದಿಂದ ಹಣ ಸಂದಾಯ ಮಾಡಿ ಮೌಲ್ಯಕ್ಕಾಗಿ ವರ್ಗಾಂತರಿತನಲ್ಲದ, ಕರಾರಿನ ತರುವಾಯ ಉದ್ಭವಿಸಿದ ಹಕ್ಕಿನಿಂದ ಅವನ ಮೂಲಕ ಕ್ಲೇಮು ಮಾಡುತ್ತಿರುವ ಯಾವನೇ ವ್ಯಕ್ತಿಯ ವಿರುದ್ಧ

(ಗ) ಕರಾರಿಗೆ ಮುಂಚಿನದಾಗಿದ್ದೂ ಮತ್ತು ವಾದಿಗೆ ತಿಳಿದಿದ್ದೂ, ಪ್ರತಿವಾದಿಯಿಂದ ವಿಸ್ಥಾಪಿತವಾಗಬಹುದಾಗಿದ್ದ ಹಕ್ಕಿನ ಮೇರೆಗೆ ಕ್ಲೇಮು ಮಾಡುತ್ತಿರುವ ಯಾವನೇ ವ್ಯಕ್ತಿಯ ವಿರುದ್ಧ.

(ಘ) ಒಂದು ಕಂಪನಿಯು ಕರಾರು ಮಾಡಿಕೊಂಡಿದ್ದು ಆ ತರುವಾಯ ಅದು ಮತ್ತೊಂದು ಕಂಪೆನಿಯೊಂದಿಗೆ ಸಮ್ಮಿಲಿತವಾದಾಗ, ಆ ಸಮ್ಮಿಲನದಿಂದ ಉದ್ಭವಿಸುವ ಹೊಸ ಕಂಪೆನಿಯ ವಿರುದ್ಧ:

() ಈ ಒಂದು ಕಂಪನಿಯ ಪ್ರವರ್ತಕರು, ಅದು ನಿಗಮಿತವಾಗುವುದಕ್ಕೆ ಮುಂಚೆ, ಕಂಪನಿಯ ಉದ್ದೇಶದ ಬಗ್ಗೆ ಕರಾರು ಮಾಡಿಕೊಂಡಿರುವಲ್ಲಿ, ನಿಗಮನದ ನಿಬಂಧನೆಗಳ ಪ್ರಕಾರ ಅಂಥ ಕರಾರು ಮಾಡಿಕೊಳ್ಳುವುದು ಸಮರ್ಥಿಸಲ್ಪಟ್ಟಾಗ ಆ ಕಂಪೆನಿಯ ವಿರುದ್ಧ

ಜಾರಿಗೊಳಿಸಬಹುದು.

ಪರಂತು, ಆ ಕಂಪೆನಿಯು ಕರಾರನ್ನು ಒಪ್ಪಿಕೊಂಡಿರಬೇಕು ಮತ್ತು ಅಂಥ ಒಪ್ಪಿಗೆಯನ್ನು ಕರಾರಿನ ಇತರ ಪಕ್ಷಕಾರರಿಗೆ ತಿಳಿಸಿರಬೇಕು.

### ನ್ಯಾಯಾಲಯದ ವಿವೇಚನೆ ಮತ್ತು ಶಕ್ತಿಗಳು

20 ನಿರ್ದಿಷ್ಟಪಾಲನೆಗೆ ಡಿಕ್ರಿಕೊಡುವುದಕ್ಕಾಗಿ ವಿವೇಚನೆ.—(1) ನಿರ್ದಿಷ್ಟ ಪಾಲನೆಗೆ ಡಿಕ್ರಿ ಕೊಡುವ ಅಧಿಕಾರ ವ್ಯಾಪ್ತಿಯು ವಿವೇಚನಾಧೀನವಾಗಿರುವುದು, ಮತ್ತು ಹಾಗೆ ಮಾಡುವುದು ವಿಧಿಬದ್ಧವಾಗಿದೆಯೆಂಬ ಮಾತ್ರದಿಂದಲೇ ಅಂಥ ಪರಿಹಾರವನ್ನು ಕೊಡಲು ನ್ಯಾಯಾಲಯವು ಬದ್ಧವಾಗಿರುವುದಿಲ್ಲ, ಆದರೆ ನ್ಯಾಯಾಲಯದ ವಿವೇಚನೆಯು ನಿರಂಕುಶವಾಗಿರದೆ ನ್ಯಾಯಸಮ್ಮತವೂ ಸಕಾರಣವೂ ಆಗಿದ್ದು ನ್ಯಾಯಿಕ ತತ್ವಗಳಿಂದ ಮಾರ್ಗದರ್ಶಿತವಾಗಿರತಕ್ಕದು ಮತ್ತು ಅಪೀಲು ನ್ಯಾಯಾಲಯವು ಸರಿಪಡಿಸಲು ಸಾಧ್ಯವಾಗಿರತಕ್ಕದು.

(2) ನಿರ್ದಿಷ್ಟಪಾಲನೆಗೆ ಡಿಕ್ರಿ ಕೊಡದಿರಲು ನ್ಯಾಯಾಲಯವು ವಿವೇಚನೆಯನ್ನು ಯುಕ್ತವಾಗಿ ಚಲಾಯಿಸಬಹುದಾದಂಥ ಸಂದರ್ಭಗಳು ಈ ಕೆಳಗಿನಂತಿವೆ.—

(ಕ) ಕರಾರು ಶೂನ್ಯಕರಣೀಯವಾಗಿರದಿದ್ದರೂ ಅದರ ನಿಬಂಧನೆಗಳು ಅಥವಾ ಅದನ್ನು ಮಾಡಿಕೊಳ್ಳುವ ಕಾಲದಲ್ಲಿ ಪಕ್ಷಕಾರರ ವರ್ತನೆ ಅಥವಾ ಅದನ್ನು ಮಾಡಿಕೊಂಡ ಇತರ ವಿದ್ಯಮಾನಗಳು, ವಾದಿಗೆ ಪ್ರತಿವಾದಿಯ ಮೇಲೆ ಅನುಚಿತ ಲಾಭವನ್ನು ಕೊಡುವಂತಿರುವುದು, ಅಥವಾ

(ಖ) ಕರಾರಿನ ಪಾಲನೆಯಿಂದ ಪ್ರತಿವಾದಿಗೆ ಅವನು ಮುಂಗಾಣದಿದ್ದಂಥ ಕೆಲವು ತೊಂದರೆಗಳು ಉಂಟಾಗುತ್ತಿರುವುದು, ಮತ್ತು ಅದನ್ನು ಪಾಲಿಸದಿದ್ದರೆ ವಾದಿಗೆ ಅಂಥ ತೊಂದರೆಯುಂಟಾಗದಿರುವುದು

(ಗ) ಪ್ರತಿವಾದಿಯು ಕರಾರು ಮಾಡಿಕೊಂಡಿರುವ ವಿದ್ಯಮಾನಗಳು ಕರಾರನ್ನು ಶೂನ್ಯಗೊಳಿಸಿದವುಗಳಾಗಿದ್ದರೂ, ಅದರ ನಿರ್ದಿಷ್ಟಪಾಲನೆಯು ಜಾರಿಗೊಳಿಸುವಿಕೆಯು ನೀತಿಸಮ್ಮತವಲ್ಲದ್ದಾಗುವುದು,

ವಿವರಣೆ 1,—ಪ್ರತಿಫಲವು ಸಾಕಷ್ಟು ಇಲ್ಲದಿರುವುದು ಮಾತ್ರವೇ, ಅಥವಾ ಕರಾರು ಪ್ರತಿವಾದಿಗೆ ದುರ್ಭರವಾಗಿದೆಯೆಂಬ ಸಂಗತಿಯು ಮಾತ್ರವೇ ಅಥವಾ ಸ್ವಭಾವತಃ ಮುಂದಾಲೋಚನೆ ಇಲ್ಲದ್ದಾಗಿರುವುದು (ಕ) ಖಂಡದ ಅರ್ಥದಲ್ಲಿ ಅನುಚಿತ ಲಾಭಪ್ರದವಾಗುವುದೆಂದು ಅಥವಾ (ಖ) ಖಂಡದ ಅರ್ಥದಲ್ಲಿ ತೊಂದರೆ ಉಂಟು ಮಾಡುವುದೆಂದು ಭಾವಿಸತಕ್ಕದಲ್ಲ.

ವಿವರಣೆ 2.—(ಖ) ಖಂಡದ ಅರ್ಥದಲ್ಲಿ ಕರಾರಿನ ಪಾಲನೆಯು ಪ್ರತಿವಾದಿಗೆ ತೊಂದರೆಯುಂಟು ಮಾಡುವುದೇ ಎಂಬ ಪ್ರಶ್ನೆಯನ್ನು, ಕರಾರಿನ ತರುವಾಯ ವಾದಿಯ ಯಾವುದೇ ಕಾರ್ಯದಿಂದ ತೊಂದರೆಯುಂಟಾದ ಸಂದರ್ಭಗಳನ್ನುಳಿದು, ಕರಾರಿನ ಕಾಲದಲ್ಲಿ ಇರುವ ವಿದ್ಯಮಾನಗಳನ್ನು ಗಮನಿಸಿ ನಿರ್ಧರಿಸತಕ್ಕದು.

(3) ವಾದಿಯು ಮುಖ್ಯಕಾರ್ಯಗಳನ್ನು ಮಾಡಿರುವ ಅಥವಾ ನಿರ್ದಿಷ್ಟ ಪಾಲನೆಗೆ ಸಾಧ್ಯವಿರುವ ಕರಾರಿನ ಫಲವಾಗಿ ನಷ್ಟಗಳನ್ನು ಅನುಭವಿಸಿದ ಯಾವುದೇ ಸಂದರ್ಭದಲ್ಲಿ ನಿರ್ದಿಷ್ಟ ಪಾಲನೆಯ ಡಿಕ್ರಿಯನ್ನು ಕೊಡಲು ನ್ಯಾಯಾಲಯವು ವಿವೇಚನೆಯನ್ನು ಸಮುಚಿತವಾಗಿ ಉಪಯೋಗಿಸಬಹುದು.

(4) ಪಕ್ಷಕಾರರಲ್ಲಿ ಇತ್ತೊಬ್ಬನ ಕೋರಿಕೆಯ ಮೇರೆಗೆ ಕರಾರರನ್ನು ಜಾರಿಗೊಳಿಸಲು ಆಗುವುದಿಲ್ಲವೆಂಬ ಕಾರಣ ಮಾತ್ರದಿಂದಲೇ ನ್ಯಾಯಾಲಯವು ಯಾವುದೇ ಪಕ್ಷಕಾರನಿಗೆ ಕರಾರಿನ ನಿರ್ದಿಷ್ಟ ಪಾಲನೆಯನ್ನು ನಿರಾಕರಿಸತಕ್ಕದಲ್ಲ.

21. ಕೆಲವು ಪ್ರಕರಣಗಳಲ್ಲಿ ನಷ್ಟ ಪರಿಹಾರವನ್ನು ಕೊಡಲು ಶಕ್ತಿ.--(1) ಕರಾರಿನ ನಿರ್ದಿಷ್ಟ ಪಾಲನೆಯ ದಾವೆಯಲ್ಲಿ, ಅಂಥ ಪಾಲನೆಯ ಜೊತೆಗೆ, ಅಥವಾ ಅದಕ್ಕೆ ಬದಲಾಗಿ ಕರಾರಿನ ಭಂಗಕ್ಕಾಗಿ ವಾದಿಯು ನಷ್ಟ ಪರಿಹಾರವನ್ನೂ ಕ್ಲೇಮು ಮಾಡಬಹುದು.

(2) ಅಂಥ ಯಾವುದೇ ದಾವೆಯಲ್ಲಿ, ನಿರ್ದಿಷ್ಟ ಪಾಲನೆಯನ್ನು ಕೊಡಕೂಡದೆಂದು, ಆದರೆ ಪಕ್ಷಕಾರರಲ್ಲಿ ಕರಾರು ಆಗಿದ್ದು ಅದು ಪ್ರತಿವಾದಿಯಿಂದ ಭಂಗಗೊಳಿಸಲ್ಪಟ್ಟಿದೆ ಎಂದು ಮತ್ತು ಅಂಥ ಭಂಗಕ್ಕಾಗಿ ವಾದಿಯು ನಷ್ಟ ಪರಿಹಾರ ಪಡೆಯಲು ಹಕ್ಕುಳ್ಳವನಾಗಿದ್ದಾನೆಂದು ನ್ಯಾಯಾಲಯವು ತೀರ್ಮಾನಿಸಿದ್ದರೆ, ಅದು ಆ ಪ್ರಕಾರ ಅವನಿಗೆ ಅಂಥ ನಷ್ಟ ಪರಿಹಾರವನ್ನು ಕೊಡತಕ್ಕದ್ದು.

(3) ಅಂಥ ಯಾವುದೇ ದಾವೆಯಲ್ಲಿ ನಿರ್ದಿಷ್ಟ ಪಾಲನೆಯನ್ನು ಕೊಡಬೇಕೆಂದೂ ಆದರೆ ಅಷ್ಟರಿಂದ ಆ ಪ್ರಕರಣಕ್ಕೆ ನ್ಯಾಯ ಮಾಡಿದಂತಾಗಲಿಲ್ಲವೆಂದೂ, ಮತ್ತು ಕರಾರಿನ ಭಂಗಕ್ಕಾಗಿ ವಾದಿಗೆ ಸ್ವಲ್ಪ ನಷ್ಟ ಪರಿಹಾರವೂ ದೊರೆಯಬೇಕೆಂದೂ, ನ್ಯಾಯಾಲಯವು ತೀರ್ಮಾನಿಸಿದರೆ, ಅದು ಆ ಪ್ರಕಾರ ಅವನಿಗೆ ಅಂಥ ನಷ್ಟ ಪರಿಹಾರವನ್ನು ಕೊಡತಕ್ಕದ್ದು.

(4) ಈ ಪ್ರಕರಣದ ಮೇರೆಗೆ ಕೊಟ್ಟ ಯಾವುದೇ ನಷ್ಟ ಪರಿಹಾರದ ಮೊಬಲಗನ್ನು ನಿರ್ಧರಿಸುವಲ್ಲಿ, ಭಾರತ ಕರಾರು ಅಧಿನಿಯಮ, 1872, (1872ರ9)ರ 73ನೆಯ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ತತ್ವಗಳಿಂದ ನ್ಯಾಯಾಲಯವು ಮಾರ್ಗದರ್ಶಿತವಾಗತಕ್ಕದ್ದು.

(5) ವಾದಿಯು ತನ್ನ ವಾದಪತ್ರದಲ್ಲಿ ಅಂಥ ನಷ್ಟಪರಿಹಾರವನ್ನು ಕ್ಲೇಮು ಮಾಡಿದ್ದ ಹೊರತು ಈ ಪ್ರಕರಣದ ಮೇರೆಗೆ ಯಾವ ನಷ್ಟ ಪರಿಹಾರವನ್ನೂ ಕೊಡತಕ್ಕದ್ದಲ್ಲ.

ಪರಂತು, ವಾದಿಯು ತನ್ನ ವಾದಪತ್ರದಲ್ಲಿ ಅಂಥ ಯಾವ ನಷ್ಟ ಪರಿಹಾರವನ್ನೂ ಕ್ಲೇಮು ಮಾಡಿರದಿದ್ದಲ್ಲಿ, ನ್ಯಾಯಾಲಯವು, ವ್ಯವಹರಣೆಯ ಯಾವುದೇ ಹಂತದಲ್ಲಿ ಅಂಥ ಪರಿಹಾರದ ಕ್ಲೇಮನ್ನು ಅದರಲ್ಲಿ ಸೇರಿಸಲು ವಾದಪತ್ರವನ್ನು ನ್ಯಾಯವೆನಿಸಬಹುದಾದ ನಿಬಂಧನೆಗಳ ಮೇರೆಗೆ ತಿದ್ದುಪಡಿ ಮಾಡಲು ಅವನಿಗೆ ಅವಕಾಶ ಕೊಡತಕ್ಕದ್ದು;

ವಿವರಣೆ.—ಕರಾರು ನಿರ್ದಿಷ್ಟ ಪಾಲನೆಗೆ ಅಸಾಧ್ಯವಾಗಿದೆಯೆಂಬ ವಿದ್ಯಮಾನವು ಈ ಪ್ರಕರಣದಿಂದ ಪ್ರದತ್ತವಾದ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸಲು ನ್ಯಾಯಾಲಯಕ್ಕೆ ಅಡ್ಡಿ ಉಂಟು ಮಾಡುವುದಿಲ್ಲ.

22 ಸ್ವಾಧೀನ, ವಿಭಜನೆ, ಸಂಚಕಾರ ಹಣದ ಮರುಪಾವತಿ ಇತ್ಯಾದಿಗಳ ಬಗ್ಗೆ ಪರಿಹಾರ ಕೊಡಲು ಶಕ್ತಿ.--(1) ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ5)ರಲ್ಲಿ ತದ್ವಿರುದ್ಧವಾಗಿ ಏನೇ ಇದ್ದರೂ, ಸ್ಥಿರ ಸ್ವತ್ತಿನ ವರ್ಗಾವಣೆಯ ಕರಾರಿನ ನಿರ್ದಿಷ್ಟ ಪಾಲನೆಗಾಗಿ ದಾವೆ ಹೂಡಿದ ಯಾವನೇ ವ್ಯಕ್ತಿಯು ಸಮುಚಿತ ಸಂದರ್ಭದಲ್ಲಿ,—

(ಕ) ಅಂಥ ಪಾಲನೆಯ ಜೊತೆಗೆ ಆ ಸ್ವತ್ತಿನ ಸ್ವಾಧೀನಕ್ಕಾಗಿ, ಅಥವಾ ವಿಭಜನೆಯ ಮತ್ತು ಅದರ ಪ್ರತ್ಯೇಕ ಸ್ವಾಧೀನಕ್ಕಾಗಿ; ಅಥವಾ

(ಖ) ನಿರ್ದಿಷ್ಟ ಪಾಲನೆಯ ಬಗ್ಗೆ ಅವನ ಕ್ಲೇಮನ್ನು ನಿರಾಕರಿಸಿದಲ್ಲಿ, ಅವನು ಸಂದಾಯ ಮಾಡಿದ ಅಥವಾ ಕೊಟ್ಟ ಯಾವುದೇ ಸಂಚಕಾರ ಹಣದ ಅಥವಾ ಠೇವಣಿಯ ವಾಪಸಾತಿಯೂ ಸೇರಿ, ಅವನಿಗೆ ಹಕ್ಕಿರಬಹುದಾದ ಯಾವುದೇ ಇತರ ಪರಿಹಾರಕ್ಕಾಗಿ ಕೇಳಬಹುದು.

(2) (1)ನೆಯ ಒಳಪ್ರಕರಣದ (ಕ) ಅಥವಾ (ಖ) ಖಂಡದ ಮೇರೆಗಿನ ಯಾವುದೇ ಪರಿಹಾರವನ್ನು, ಅದನ್ನು ನಿರ್ದಿಷ್ಟವಾಗಿ ಕ್ಲೇಮು ಮಾಡಿದ್ದ ಹೊರತು, ನ್ಯಾಯಾಲಯವು ಮಂಜೂರು ಮಾಡತಕ್ಕದ್ದಲ್ಲ,

ಪರಂತು, ವಾದಿಯು ಯಾವುದೇ ಅಂಥ ಪರಿಹಾರವನ್ನು ತನ್ನ ವಾದ ಪತ್ರದಲ್ಲಿ ಕ್ಲೇಮು ಮಾಡದಲ್ಲಿ, ನ್ಯಾಯಾಲಯವು ವ್ಯವಹರಣೆಯ ಯಾವುದೇ ಹಂತದಲ್ಲಿ ಅಂಥ ಪರಿಹಾರದ ಕ್ಲೇಮನ್ನು ಅದರಲ್ಲಿ ಸೇರಿಸಲು ನ್ಯಾಯೋಚಿತವಾಗಬಹುದಾದ ನಿಬಂಧನೆಗಳ ಮೇರೆಗೆ ವಾದಪತ್ರವನ್ನು ತಿದ್ದುಪಡಿ ಮಾಡಲು ಅವನಿಗೆ ಅವಕಾಶ ಕೊಡತಕ್ಕದ್ದು.

(3) (1)ನೇ ಒಳಪ್ರಕರಣದ (ಖ) ಖಂಡದ ಮೇರೆಗೆ ನಷ್ಟ ಪರಿಹಾರವನ್ನು ಕೊಡುವ ನ್ಯಾಯಾಲಯದ ಶಕ್ತಿಯು, 21ನೆಯ ಪ್ರಕರಣದ ಮೇರೆಗೆ ನಷ್ಟ ಪರಿಹಾರವನ್ನು ಕೊಡುವ ಅದರ ಶಕ್ತಿಗಳಿಗೆ ಬಾಧಕವಾಗತಕ್ಕದ್ದಲ್ಲ.

23. ನಿಗದಿಯಾದ ನಷ್ಟ ಪರಿಹಾರವು ನಿರ್ದಿಷ್ಟ ಪಾಲನೆಗೆ ಪ್ರತಿಬಂಧಕವಲ್ಲ.— (1) ಒಂದು ಕರಾರಿನಲ್ಲಿ ಅದರ ಭಂಗವಾದ ಸಂದರ್ಭದಲ್ಲಿ ಸಂದಾಯ ಮಾಡಬೇಕಾದ ಮೊಬಲಗನ್ನು ನಮೂದಿಸಿದ್ದರೂ, ಮತ್ತು ತಪ್ಪಿದ ಪಕ್ಷಕಾರನು ಅದನ್ನು ಕೊಡಲು ಸಿದ್ಧನಿದ್ದರೂ, ಕರಾರಿನ ನಿಬಂಧನೆಗಳನ್ನು ಮತ್ತು ಅದರ ಇತರ ವಿದ್ಯಮಾನಗಳನ್ನು ಗಮನಿಸಲಾಗಿ, ಆ ಕರಾರಿನ ಪಾಲನೆಯನ್ನು ಭದ್ರಪಡಿಸಿಕೊಳ್ಳುವುದಕ್ಕಾಗಿ ಅಂಥ ಮೊಬಲಗನ್ನು ತೋರಿಸಲಾಗಿದೆಯೆಂದು ಮತ್ತು ನಿರ್ದಿಷ್ಟ ಪಾಲನೆಯ ಬದಲಾಗಿ ತಪ್ಪಿದ ಪಕ್ಷಕಾರನು ಹಣ ಸಂದಾಯ ಮಾಡಲು ಅವಕಾಶ ಕೊಡುವ ಉದ್ದೇಶವಿದ್ದಿಲ್ಲವೆಂದು ನ್ಯಾಯಾಲಯಕ್ಕೆ ಮನದಟ್ಟಾದರೆ ಕರಾರನ್ನು ಅನ್ಯಥಾ ನಿರ್ದಿಷ್ಟವಾಗಿ ಜಾರಿಗೊಳಿಸುವುದು ಸೂಕ್ತವಾಗಿದ್ದರೆ, ಅದನ್ನು ಹಾಗೆ ಜಾರಿಗೊಳಿಸಬಹುದು.

(2) ಈ ಪ್ರಕರಣದ ಮೇರೆಗೆ ನಿರ್ದಿಷ್ಟ ಪಾಲನೆಯನ್ನು ಜಾರಿಗೊಳಿಸುವಾಗ ಕರಾರಿನಲ್ಲಿ ನಮೂದಿಸಿದ ಹಣದ ಸಂದಾಯಕ್ಕಾಗಿಯೂ ನ್ಯಾಯಾಲಯವು ಡಿಕ್ರಿ ಕೊಡತಕ್ಕದ್ದಲ್ಲ.

24. ನಿರ್ದಿಷ್ಟ ಪಾಲನೆಯ ದಾವೆಯು ವಜಾ ಆದ ಬಳಿಕ ನಷ್ಟ ಪರಿಹಾರದ ದಾವೆಗೆ ಪ್ರತಿಬಂಧ.— ಕರಾರಿನ ಅಥವಾ ಅದರ ಯಾವುದೇ ಭಾಗದ ನಿರ್ದಿಷ್ಟ ಪಾಲನೆಗಾಗಿರುವ ದಾವೆಯ ವಜಾ ಮಾಡುವಿಕೆಯು, ಅಂಥ ಕರಾರಿನ ಅಥವಾ ಸಂದರ್ಭಾನುಸಾರ ಅದರ ಭಾಗದ ಭಂಗಕ್ಕಾಗಿ ನಷ್ಟ ಪರಿಹಾರ ಕೇಳಲು ದಾವೆ ಹೂಡುವ ವಾದಿಯ ಹಕ್ಕಿಗೆ ಪ್ರತಿಬಂಧಕವಾಗತಕ್ಕದ್ದು. ಆದರೆ, ಅಂಥ ಭಂಗದ ಕಾರಣದಿಂದಾಗಿ ಅವನಿಗೆ ಹಕ್ಕಿರುವ ಯಾವುದೇ ಇತರ ಪರಿಹಾರಕ್ಕಾಗಿ ದಾವೆ ಮಾಡುವ ಅವನ ಅಧಿಕಾರಕ್ಕೆ ಪ್ರತಿಬಂಧಕವಾಗತಕ್ಕದ್ದಲ್ಲ.

### ಐತೀರ್ಪುಗಳ ಜಾರಿ ಮತ್ತು ವ್ಯವಸ್ಥಾಪನೆಯ ನಿರ್ವಹಣೆಗೆ ನಿದೇಶಗಳು

25. ಕೆಲವು ಐತೀರ್ಪುಗಳ ಮತ್ತು ವ್ಯವಸ್ಥಾಪನೆಗಳ ನಿರ್ವಹಣೆಗಾಗಿ ಮರಣ ಶಾಸನಾನುಸಾರದ ನಿದೇಶಗಳಿಗೆ ಹಿಂದಿನ ಪ್ರಕರಣಗಳ ಅನ್ವಯ.—ಕರಾರುಗಳ ಸಂಬಂಧದ ಈ ಅಧ್ಯಾಯದ ಉಪಬಂಧಗಳು, ಮಧ್ಯಸ್ಥಿಕ ಅಧಿನಿಯಮ, 1940 (1940ರ 10) ಅನ್ವಯಿಸದಿರುವ ಐತೀರ್ಪುಗಳಿಗೆ ಮತ್ತು ಮರಣ ಶಾಸನದ ಅಥವಾ ಮರಣ ಶಾಸನಾನುಬಂಧದ ವಿಶಿಷ್ಟ ವ್ಯವಸ್ಥಾಪನೆಯ ನಿರ್ವಹಣೆಯ ನಿದೇಶಗಳಿಗೆ ಅನ್ವಯಿಸತಕ್ಕದು.

## ಅಧ್ಯಾಯ III

### ಲಿಖಿತಗಳ ಸರಿಪಡಿಸುವಿಕೆ

26. ಲಿಖಿತಗಳನ್ನು ಯಾವಾಗ ಸರಿಪಡಿಸಬಹುದು.—(1) (ಕಂಪನಿ ಅಧಿನಿಯಮ 1956) (1956ರ 1) ಅನ್ವಯಿಸುವ ಕಂಪನಿಯ ಸಂಘದ ನಿಯಮಾವಳಿಯಲ್ಲದ ಯಾವುದೇ ಕರಾರು ಅಥವಾ ಲಿಖಿತವು, ಮೋಸ ಅಥವಾ ಪಕ್ಷಕಾರರ ಪರಸ್ಪರ ತಪ್ಪಿನಿಂದಾಗಿ ಅದರ ನಿಜವಾದ ಆಶಯವನ್ನು ವ್ಯಕ್ತಪಡಿಸದಿರುವಾಗ—

(ಕ) ಅವರಲ್ಲಿ ಯಾವನೇ ಪಕ್ಷಕಾರನು ಅಥವಾ ಅವನ ಹಿತಾಸಕ್ತಿಯ ಪ್ರತಿನಿಧಿಯು ಆ ಲಿಖಿತವನ್ನು ಸರಿಪಡಿಸುವುದಕ್ಕಾಗಿ ದಾವೆ ಹೂಡಬಹುದು, ಅಥವಾ

(ಖ) ಲಿಖಿತದಿಂದ ಉದ್ಭವಿಸುವ ಯಾವುದೇ ಅಧಿಕಾರವು ವಾದಾಂಶವಾಗಿರುವ ಯಾವುದೇ ದಾವೆಯಲ್ಲಿ, ವಾದಿಯು ತನ್ನ ವಾದದಲ್ಲಿ ಅಂಥ ಲಿಖಿತವನ್ನು ಸರಿಪಡಿಸಬೇಕೆಂದು ಕೇಳಬಹುದು, ಅಥವಾ

(ಗ) (ಖ) ಖಂಡದಲ್ಲಿ ನಿರ್ದೇಶಿಸಿದಂಥ ಯಾವುದೇ ದಾವೆಯಲ್ಲಿ, ಪ್ರತಿವಾದಿಯು ತನಗೆ ಅವಕಾಶವಿರುವ ಇತರ ಯಾವುದೇ ಪ್ರತಿವಾದದ ಜೊತೆಗೆ, ಲಿಖಿತವನ್ನು ಸರಿಪಡಿಸಲು ಕೇಳಿಕೊಳ್ಳಬಹುದು.

(2) (1)ನೆಯ ಒಳಪ್ರಕರಣದ ಮೇರೆಗೆ ಕರಾರು ಅಥವಾ ಲಿಖಿತವನ್ನು ಸರಿಪಡಿಸಲು ಕೇಳಿರುವ ಯಾವುದೇ ದಾವೆಯಲ್ಲಿ, ಲಿಖಿತವು, ಮೋಸ ಅಥವಾ ತಪ್ಪಿನಿಂದಾಗಿ, ಪಕ್ಷಕಾರರ ನಿಜವಾದ ಆಶಯವನ್ನು ವ್ಯಕ್ತಪಡಿಸುವುದಿಲ್ಲವೆಂದು ನ್ಯಾಯಾಲಯವು ನಿರ್ಣಯಿಸಿದರೆ, ತನ್ನ ವಿವೇಚನಾನುಸಾರ, ಅಂಥ ಲಿಖಿತವನ್ನು, ಮೂರನೆಯ ವ್ಯಕ್ತಿಗಳು ಸದ್ಭಾವದಿಂದ ಬೆಲೆಕೊಟ್ಟು, ಅರ್ಜಿಸಿಕೊಂಡಿರುವ ಅಧಿಕಾರಗಳಿಗೆ ಬಾಧಕವಾಗದಂತೆ ಮಾಡಬಹುದಾದ ಮಟ್ಟಿಗೆ ಆ ಆಶಯವನ್ನು ವ್ಯಕ್ತಪಡಿಸುವ ಹಾಗೆ ಸರಿಪಡಿಸಲು ನ್ಯಾಯಾಲಯವು ನಿದೇಶಿಸಬಹುದು.

(3) ಲಿಖಿತ ಕರಾರನ್ನು ಮೊದಲು ಸರಿಪಡಿಸಬಹುದು, ಮತ್ತು ಸರಿಪಡಿಸಬೇಕೆಂದು ಕ್ಲೇಮು ಮಾಡುವ ಪಕ್ಷಕಾರನು ತನ್ನ ವಾದದಲ್ಲಿ ಹಾಗೆಂದು ಪ್ರಾರ್ಥಿಸಿಕೊಂಡರೆ ಮತ್ತು ನ್ಯಾಯಾಲಯವು ಯೋಗ್ಯವೆಂದು ಭಾವಿಸಿದರೆ, ಆ ಮೇಲೆ ಅದನ್ನು ನಿರ್ದಿಷ್ಟವಾಗಿ ಜಾರಿಗೊಳಿಸಬಹುದು.

(4) ಈ ಪ್ರಕರಣದ ಮೇರೆಗೆ ಲಿಖಿತವನ್ನು ಸರಿಪಡಿಸುವುದಕ್ಕೆ, ಯಾವುದೇ ಪಕ್ಷಕಾರನಿಗೆ, ಯಾವ ಪರಿಹಾರವನ್ನೂ ಅವನು ಅದನ್ನು ನಿರ್ದಿಷ್ಟವಾಗಿ ಕ್ಲೇಮು ಮಾಡಿದ್ದ ಹೊರತು, ಮಂಜೂರು ಮಾಡತಕ್ಕದ್ದಲ್ಲ,

ಪರಂತು, ಅಂಥ ಪರಿಹಾರವನ್ನು ಪಕ್ಷಕಾರನು ತನ್ನ ವಾದಪತ್ರದಲ್ಲಿ ಕ್ಲೇಮು ಮಾಡಿರದಿದ್ದಲ್ಲಿ, ನ್ಯಾಯಾಲಯವು, ವ್ಯವಹರಣೆಯ ಯಾವುದೇ ಹಂತದಲ್ಲಿ, ಅಂಥ ಕ್ಲೇಮನ್ನು ಸೇರಿಸಲು, ನ್ಯಾಯವೆನಿಸಬಹುದಾದ ನಿಬಂಧನೆಗಳ ಮೇಲೆ ಅಂಥ ವಾದ ಪತ್ರವನ್ನು ತಿದ್ದುಪಡಿ ಮಾಡಲು, ಅವನಿಗೆ ಅವಕಾಶ ಕೊಡತಕ್ಕದು.

## ಅಧ್ಯಾಯ IV

### ಕರಾರುಗಳ ರದ್ದಿಯಾತಿ

27. ರದ್ದಿಯಾತಿಗೆ ಯಾವಾಗ ನ್ಯಾಯನಿರ್ಣಯ ಕೊಡಬಹುದು ಅಥವಾ ನಿರಾಕರಿಸಬಹುದು

(1) ಕರಾರಿನಲ್ಲಿ ಹಿತಾಸಕ್ತಿ ಹೊಂದಿರುವ ಯಾವನೇ ವ್ಯಕ್ತಿಯು ಅದನ್ನು ರದ್ದುಗೊಳಿಸಲು ದಾವೆ ಹೂಡಬಹುದು, ಮತ್ತು ನ್ಯಾಯಾಲಯವು ಅಂಥ ರದ್ದಿಯಾತಿಗೆ ಈ ಕೆಳಗಿನ ಯಾವುದೇ ಸಂದರ್ಭಗಳಲ್ಲಿ ನ್ಯಾಯನಿರ್ಣಯ ಕೊಡಬಹುದು ಎಂದರೆ.—

(ಕ) ಕರಾರು ವಾದಿಯಿಂದ ಶೂನ್ಯಗೊಳಿಸಬಹುದಾಗಿದ್ದರೆ ಅಥವಾ ಮುಕ್ತಾಯಗೊಳಿಸಬಹುದಾಗಿದ್ದರೆ

(ಖ) ಕರಾರು ಅದರ ಮೇಲು ನೋಟಕ್ಕೆ ಕಾಣದ ಕಾರಣಗಳಿಗಾಗಿ ವಿಧಿ ವಿರುದ್ಧವಾಗಿರುವಲ್ಲಿ ಮತ್ತು ಅದಕ್ಕೆ ವಾದಿಗಿಂತ ಪ್ರತಿವಾದಿಯೇ ಹೆಚ್ಚು ಆಕ್ಷೇಪಣೀಯನಾಗಿರುವಲ್ಲಿ,

(2) (1)ನೆಯ ಒಳಪ್ರಕರಣದಲ್ಲಿ ಏನೇ ಇದ್ದರೂ, ನ್ಯಾಯಾಲಯವು—

(ಕ) ವಾದಿಯು ಪ್ರತ್ಯಕ್ಷವಾಗಿ ಅಥವಾ ಅಪ್ರತ್ಯಕ್ಷವಾಗಿ ಕರಾರನ್ನು ಅನುಸಮರ್ಥಿಸಿದ್ದಲ್ಲಿ; ಅಥವಾ

(ಖ) ಕರಾರು ಆದಂದಿನಿಂದ ಈಚೆಗೆ (ಪ್ರತಿವಾದಿಯ ಯಾವುದೇ ಕಾರ್ಯದಿಂದಾದುದಲ್ಲದೆ) ವಿದ್ಯಮಾನಗಳ ಬದಲಾವಣೆಯಿಂದಾಗಿ, ಕರಾರನ್ನು ಮಾಡಿಕೊಂಡಾಗ ಪಕ್ಷಕಾರರಿದ್ದ ಸ್ಥಿತಿಗಳಿಗೆ ಬಹುಮಟ್ಟಿಗೆ ಅವರನ್ನು ಪುನಃ ತರುವುದು ಸಾಧ್ಯವಿಲ್ಲದಿರುವಲ್ಲಿ ; ಅಥವಾ

(ಗ) ಕರಾರು ಅಸ್ತಿತ್ವದಲ್ಲಿರುವಾಗ, ಮೂರನೆಯ ಪಕ್ಷಕಾರರು ತಿಳಿಯದೆಯೆ ಸದ್ಭಾವದಿಂದ ಬೆಲೆ ಕೊಟ್ಟು ಅಧಿಕಾರಗಳನ್ನು ಆರ್ಜಿಸಿಕೊಂಡಿರುವಲ್ಲಿ . ಅಥವಾ

(ಘ) ಕರಾರಿನ ಒಂದು ಅಂಶವನ್ನು ಮಾತ್ರ ರದ್ದುಗೊಳಿಸಲು ಕೇಳಿಕೊಂಡಿದ್ದು ಅಂಥ ಅಂಶವನ್ನು ಕರಾರಿನಿಂದ ಪ್ರತ್ಯೇಕಿಸಲು ಆಗದಿರುವಲ್ಲಿ :

ಕರಾರನ್ನು ರದ್ದುಗೊಳಿಸಲು ನಿರಾಕರಿಸಬಹುದು.

ವಿವರಣೆ.— ಈ ಪ್ರಕರಣದಲ್ಲಿ, ಸ್ವತ್ತಿನ ವರ್ಗಾವಣೆ ಅಧಿನಿಯಮ, 1882 (1882ರ 4) ವ್ಯಾಪ್ತವಾಗದ ರಾಜ್ಯ ಕ್ಷೇತ್ರಗಳ ಸಂಬಂಧದಲ್ಲಿ "ಕರಾರು" ಎಂದರೆ ಲಿಖಿತ ಕರಾರು.

28. ನಿರ್ದಿಷ್ಟ ಪಾಲನೆಗೆ ಡಿಕ್ರಿ ಕೊಟ್ಟಿರುವ ಕೆಲವು ಸಂದರ್ಭಗಳಲ್ಲಿ ಸ್ಥಿರಸ್ವತ್ತಿನ ಮಾರಾಟ ಅಥವಾ ಗುತ್ತಿಗೆಯ ಕರಾರಿನ ರದ್ದಿಯಾತಿ.— (1) ಸ್ಥಿರ ಸ್ವತ್ತಿನ ಮಾರಾಟ ಅಥವಾ ಗುತ್ತಿಗೆಯ ಕರಾರಿನ ನಿರ್ದಿಷ್ಟಪಾಲನೆಗೆ ಡಿಕ್ರಿ ಮಾಡಿದ್ದು, ಕೊಂಡುಕೊಂಡಿರು ವವನು ಅಥವಾ ಗುತ್ತಿಗೆದಾರನು ಡಿಕ್ರಿಯು ಅವಕಾಶ ಕೊಟ್ಟಿರುವ ಅಥವಾ ನ್ಯಾಯಾಲಯ ಅವಕಾಶ ಕೊಡಬಹುದಾದ ಇನ್ನೂ ಹೆಚ್ಚಿನ ಅವಧಿಯೊಳಗಾಗಿ, ನ್ಯಾಯಾಲಯವು ಸಂದಾಯ ಮಾಡಲು ಅವನಿಗೆ ಆದೇಶ ಮಾಡಿರುವ ಖರೀದಿ ಬೆಲೆಯನ್ನು ಅಥವಾ ಇತರ ಹಣವನು ಸಂದಾಯ ಮಾಡಿರುವ ಯಾವುದೇ ದಾವೆಯಲ್ಲಿ, ಮಾರಾಟಗಾರನು ಅಥವಾ ಗುತ್ತಿಗೆಗೆ ಕೊಟ್ಟವನು, ಡಿಕ್ರಿ ಕೊಟ್ಟಿರುವ ಅದೇ ದಾವೆಯಲ್ಲಿ ಕರಾರನ್ನು ರದ್ದುಗೊಳಿಸಲು ಆವೇದನ ಮಾಡಬಹುದು ಮತ್ತು ಹಾಗೆ ಆವೇದನ ಮಾಡಿದಾಗ, ನ್ಯಾಯಾಲಯವು, ಆದೇಶದ ಮೂಲಕ ತಪ್ಪಿರುವ ಪಕ್ಷಕಾರನ ಮಟ್ಟಿಗೆ ಅಥವಾ ಮೊಕದ್ದಮೆಯು ನ್ಯಾಯಕ್ಕನು ಸಾರವಾಗಿ ಪೂರ್ತಿಯಾಗಿ ಕರಾರನು ರದ್ದುಗೊಳಿಸಬಹುದು.

(2) (1)ನೆಯ ಒಳಪ್ರಕರಣದ ಮೇರೆಗೆ ಕರಾರನ್ನು ರದ್ದುಗೊಳಿಸಿರುವಲ್ಲಿ, ನ್ಯಾಯಾಲಯವು :

(ಕ) ಕೊಂಡುಕೊಂಡವನು ಅಥವಾ ಗುತ್ತಿಗೆದಾರನು ಕರಾರಿನ ಮೇರೆಗೆ ಸ್ವತ್ತಿನ ಸ್ವಾಧೀನವನ್ನು ಪಡೆದುಕೊಂಡಿದ್ದರೆ, ಅಂಥ ಸ್ವಾಧೀನವನ್ನು ಮಾರಾಟಗಾರನಿಗೆ ಅಥವಾ ಗುತ್ತಿಗೆಗೆ ಕೊಟ್ಟವನಿಗೆ ಪುನ: ಒಪ್ಪಿಸಲು ನಿದೇಶಿಸತಕ್ಕದು, ಮತ್ತು

(ಖ) ಕೊಂಡುಕೊಂಡವನು ಅಥವಾ ಗುತ್ತಿಗೆದಾರನು, ಸ್ವಾಧೀನ ಪಡೆದುಕೊಂಡ ಕಾಲಾವಧಿಯಿಂದ ಅದನ್ನು ಮಾರಾಟಗಾರನಿಗೆ ಅಥವಾ ಗುತ್ತಿಗೆಗೆ ಕೊಟ್ಟವನಿಗೆ ಪುನಃ ಒಪ್ಪಿಸುವ ವರೆಗೆ, ಆ ಸ್ವತ್ತಿನ ಸಂಬಂಧದಲ್ಲಿ ಒದಗಿದ ಎಲ್ಲ ಬಾಡಿಗೆಗಳನ್ನು ಮತ್ತು ಲಾಭಗಳನ್ನು, ಮಾರಾಟಗಾರನಿಗೆ ಅಥವಾ ಗುತ್ತಿಗೆಗೆ ಕೊಟ್ಟವನಿಗೆ ಸಂದಾಯ ಮಾಡಲು, ಮತ್ತು ಮೊಕದ್ದಮೆಯು ನ್ಯಾಯಕ್ಕೆ ಹಾಗೆ ಅಗತ್ಯವಾದರೆ, ಕೊಂಡುಕೊಂಡವನು ಅಥವಾ ಗುತ್ತಿಗೆದಾರನು ಕರಾರಿನ ಸಂಬಂಧದಲ್ಲಿ ಸಂಚಕಾರರಾಗಿ ಅಥವಾ ಠೇವಣಿಯಾಗಿ ಕೊಟ್ಟ ಹಣವನ್ನು ವಾಪಸ್ಸು ಮಾಡಲು ನಿದೇಶಿಸಬಹುದು.

(3) ಕೊಂಡುಕೊಂಡವನು ಅಥವಾ ಗುತ್ತಿಗೆದಾರನು, (1)ನೆಯ ಒಳಪ್ರಕರಣ ದಲ್ಲಿ ನಿರ್ದೇಶಿಸಿದ ಅವಧಿಯೊಳಗಾಗಿ ಡಿಕ್ರಿಯ ಮೇರೆಗೆ ಅವನು ಸಂದಾಯ ಮಾಡಬೇಕೆಂದು ಆದೇಶಿಸಲಾದ ಖರೀದಿ ಬೆಲೆಯನ್ನು ಅಥವಾ ಇತರ ಹಣವನ್ನು ಸಂದಾಯ ಮಾಡಿದರೆ, ನ್ಯಾಯಾಲಯವು, ಅದೇ ದಾವೆಯಲ್ಲಿ ಮಾಡಿದ ಆವೇದನದ ಮೇಲೆ, ಸಮುಚಿತ ಸಂದರ್ಭಗಳಲ್ಲಿ ಈ ಕೆಳಗಿನ ಎಲ್ಲ ಅಥವಾ ಯಾವುವೇ ಪರಿಹಾರಗಳು ಸೇರಿ, ಅವನಿಗೆ ಹಕ್ಕಿರುವ ಇನ್ನೂ ಹೆಚ್ಚಿನ ಪರಿಹಾರವನ್ನು ಆ ಕೊಂಡುಕೊಂಡವನಿಗೆ ಅಥವಾ ಗುತ್ತಿಗೆ ದಾರನಿಗೆ ಕೊಡಬಹುದು ; ಎಂದರೆ

(ಕ) ಮಾರಾಟಗಾರನು ಅಥವಾ ಗುತ್ತಿಗೆಗೆ ಕೊಡುವವನು ಯುಕ್ತವಾದ ವರ್ಗಾವಣೆ ಪತ್ರವನ್ನು ಅಥವಾ ಗುತ್ತಿಗೆ ಪತ್ರವನ್ನು ಬರೆದು ಕೊಡುವುದು.

(ಖ) ಅಂಥ ವರ್ಗಾವಣೆ ಪತ್ರವನ್ನು ಅಥವಾ ಗುತ್ತಿಗೆ ಪತ್ರವನ್ನು ಬರೆದು ಕೊಟ್ಟ ಮೇಲೆ ಸ್ವತ್ತಿನ ಸ್ವಾಧೀನತೆಯನ್ನು ಅಥವಾ ಅದನ್ನು ವಿಭಜನೆ ಮಾಡಿ ಅದರ ಪ್ರತ್ಯೇಕ ಸ್ವಾಧೀನತೆಯನ್ನು ಒಪ್ಪಿಸಿಕೊಡತಕ್ಕುದು.

(4) ಈ ಪ್ರಕರಣದ ಮೇರೆಗೆ ಕ್ಲೇಮು ಮಾಡಬಹುದಾದ ಯಾವುದೇ ಪರಿಹಾರದ ಬಗ್ಗೆ ಸಂದರ್ಭಾನುಸಾರ ಮಾರಾಟಗಾರನ, ಕೊಂಡುಕೊಳ್ಳುವವನ, ಗುತ್ತಿಗೆಗೆ ಕೊಡುವವನ ಅಥವಾ ಗುತ್ತಿಗೆದಾರನ ಕೇಳಿಕೆಯ ಮೇಲೆ ಯಾವ ಪ್ರತ್ಯೇಕ ದಾವೆಯೂ ಆಗತಕ್ಕದಲ್ಲ.

(5) ಈ ಪ್ರಕರಣದ ಮೇರೆಗಿನ ಯಾವುದೇ ವ್ಯವಹರಣೆಗಳ ಖರ್ಚುಗಳು ನ್ಯಾಯಾಲಯದ ವಿವೇಚನೆಗೆ ಒಳಪಟ್ಟಿರತಕ್ಕುದು.

**29.** ನಿರ್ದಿಷ್ಟ ಪಾಲನೆಯ ದಾವೆಯಲ್ಲಿ ರದ್ದಿಯಾತಿಗೆ ಪರ್ಯಾಯ ಪ್ರಾರ್ಥನೆ.—ಲಿಖಿತ ಕರಾರಿನ ನಿರ್ದಿಷ್ಟ ಪಾಲನೆಗೆ ದಾವೆ ಹೂಡುವ ವಾದಿಯು, ಕರಾರನ್ನು ನಿರ್ದಿಷ್ಟವಾಗಿ ಜಾರಿಗೊಳಿಸಲು ಸಾಧ್ಯವಿರದಿದ್ದರೆ, ಪರ್ಯಾಯವಾಗಿ ಅದನ್ನು ರದ್ದುಗೊಳಿಸಬಹುದೆಂದೂ ಮತ್ತು ರದ್ದುಗೊಳಿಸಲು ಒಪ್ಪಿಸಬಹುದೆಂದೂ ಪ್ರಾರ್ಥಿಸಬಹುದು ಮತ್ತು ನ್ಯಾಯಾಲಯವು ಆ ಕರಾರನ್ನು ನಿರ್ದಿಷ್ಟವಾಗಿ ಜಾರಿಗೊಳಿಸಲು ನಿರಾಕರಿಸಿದ್ದರೆ. ಅದನ್ನು ರದ್ದುಗೊಳಿಸುವಂತೆ ಮತ್ತು ಆ ಪ್ರಕಾರ ಒಪ್ಪಿಸಿಕೊಡುವಂತೆ ನಿರ್ದೇಶಿಸಬಹುದು.

30. ನ್ಯಾಯಾಲಯವು ರದ್ದುಗೊಳಿಸುವ ಪಕ್ಷಕಾರರನ್ನು ನೀತಿಸಮ್ಮತವಾಗಿ ವರ್ತಿಸಲು ಅಗತ್ಯಪಡಿಸಬಹುದು.— ಕರಾರಿನ ರದ್ದಿಯಾತಿಗೆ ನ್ಯಾಯ ನಿರ್ಣಯ ಕೊಟ್ಟ ಬಳಿಕ ಅಂಥ ಪರಿಹಾರವನ್ನು ಪಡೆದ ಪಕ್ಷಕಾರನು ಇನ್ನೊಬ್ಬ ಪಕ್ಷಕಾರನಿಂದ ಪಡೆದು ಕೊಂಡಿರಬಹುದಾದ ಯಾವುದೇ ಲಾಭವನ್ನು ಸಾಧ್ಯವಿದ್ದ ಮಟ್ಟಿಗೆ ಹಿಂದಿರುಗಿಸಲು ಮತ್ತು ನ್ಯಾಯದ ದೃಷ್ಟಿಯಿಂದ ಅಗತ್ಯವೆನಿಸಬಹುದಾದಂಥ ಯಾವುದೇ ನಷ್ಟ ಪರಿಹಾರವನ್ನು ಅವನಿಗೆ ಕೊಡಲು ನ್ಯಾಯಾಲಯವು ಅಗತ್ಯಪಡಿಸಬಹುದು.

## ಅಧ್ಯಾಯ—V

### ಲಿಖಿತಗಳ ರದ್ದಿಯಾತಿ

31. ರದ್ದಿಯಾತಿಗೆ ಯಾವಾಗ ಆದೇಶಿಸಬಹುದು.—(1) ಯಾವ ವ್ಯಕ್ತಿಯ ವಿರುದ್ಧ ಲಿಖಿತ ಪತ್ರವು ಶೂನ್ಯವಾದುದಾಗಿದ್ದು ಅಥವಾ ಶೂನ್ಯಕರಣೀಯವಾಗಿದ್ದು ಮತ್ತು ಅಂಥ ಲಿಖಿತವನ್ನು ಹಾಗೆಯೇ ಬಿಟ್ಟರೆ ತನಗೆ ಗಂಭೀರ ಕ್ಷತಿಯುಂಟಾಗಬಹುದೆಂಬ ಬಗ್ಗೆ ಸಕಾರಣ ಸಂದೇಹವಿರುವ ವ್ಯಕ್ತಿಯು, ಅದನ್ನು ಶೂನ್ಯವಾದುದೆಂದು ಅಥವಾ ಶೂನ್ಯಕರಣೀಯವಾದುದೆಂದು ನ್ಯಾಯ ನಿರ್ಣಯ ಪಡೆಯಲು ದಾವೆ ಹೂಡಬಹುದು, ಮತ್ತು ನ್ಯಾಯಾಲಯವು ತನ್ನ ವಿವೇಚನಾನುಸಾರ, ಅದನ್ನು ಹಾಗೆಂದು ನ್ಯಾಯ ನಿರ್ಣಯಿಸಬಹುದು ಮತ್ತು ಅದನ್ನು ಒಪ್ಪಿಸಿಕೊಡಲು ಹಾಗೂ ರದ್ದುಗೊಳಿಸಲು ಆದೇಶಿಸಬಹುದು.

(2) ಲಿಖಿತವನ್ನು ಭಾರತ ನೋಂದಣಿ ಅಧಿನಿಯಮ, 1908 (1908 ರ 16) ರ ಮೇರೆಗೆ ನೋಂದಣಿ ಮಾಡಲಾಗಿದ್ದರೆ, ನ್ಯಾಯಾಲಯವು, ಆ ಲಿಖಿತವನ್ನು ಹಾಗೆ ಯಾವ ಅಧಿಕಾರಿಯ ಕಾರ್ಯಾಲಯದಲ್ಲಿ ನೋಂದು ಮಾಡಲಾಗಿದೆಯೋ ಅವನಿಗೆ ತನ್ನ

ಡಿಕ್ರಿಯ ಒಂದು ಪ್ರತಿಯನ್ನು ಕೂಡ ಕಳಿಸಿಕೊಡತಕ್ಕುದು ಮತ್ತು ತನ್ನ ಪುಸ್ತಕಗಳಲ್ಲಿರುವ ಆ ಲಿಖಿತದ ಪ್ರತಿಯ ಮೇಲೆ ಅದು ರದ್ದುಗೊಂಡಿರುವ ಸಂಗತಿಯನ್ನು ನಮೂದಿಸ ತಕ್ಕುದು.

32. ಯಾವ ಲಿಖಿತಗಳನ್ನು ಭಾಗಶ: ರದ್ದುಗೊಳಿಸಬಹುದು.—ಲಿಖಿತವು ವಿವಿಧ ಅಧಿಕಾರಿಗಳ ಅಥವಾ ವಿವಿಧ ಹೊಣೆಗಾರಿಕೆಗಳ ಸಾಕ್ಷ್ಯವಾಗಿರುವಲ್ಲಿ, ನ್ಯಾಯಾಲಯವು ಯುಕ್ತ ಸಂದರ್ಭದಲ್ಲಿ ಅದನ್ನು ಭಾಗಶ: ರದ್ದುಗೊಳಿಸಬಹುದು ಮತ್ತು ಉಳಿದ ಭಾಗವು ಅಸ್ತಿತ್ವದಲ್ಲಿರಲು ಅವಕಾಶ ಕೊಡಬಹುದು.

33. ಲಿಖಿತವು ರದ್ದುಗೊಂಡಾಗ ಅಥವಾ ಅದು ಶೂನ್ಯವಾದುದು ಅಥವಾ ಶೂನ್ಯ ಕರಣೀಯವಾದುದು ಆಗಿದೆಯೆಂದು ಯಶಸ್ವಿಯಾಗಿ ಪ್ರತಿರೋಧಿಸಿದಾಗ ಲಾಭವನ್ನು ಹಿಂದಿರುಗಿಸಲು ಅಥವಾ ನಷ್ಟ ಪರಿಹಾರವನ್ನು ಕೊಡಲು ಅಗತ್ಯಪಡಿಸುವ ಶಕ್ತಿ.—(1) ಲಿಖಿತದ ರದ್ದಿಯಾತಿಯನ್ನು ನ್ಯಾಯ ನಿರ್ಣಯಿಸಿದ ಬಳಿಕ ಇನ್ನೊಬ್ಬ ಪಕ್ಷಕಾರನಿಂದ ಪಡೆದುಕೊಂಡಿರಬಹುದಾದ ಲಾಭವನ್ನು ಸಾಧ್ಯವಿದ್ದ ಮಟ್ಟಿಗೆ ಅಂಥ ಪರಿಹಾರವನ್ನು ಪಡೆದಿರುವ ಪಕ್ಷಕಾರನು ಹಿಂದಿರುಗಿಸಲು ಮತ್ತು ನ್ಯಾಯದ ದೃಷ್ಟಿಯಿಂದ ಅಗತ್ಯವೆನಿಸ ಬಹುದಾದ ಯಾವುದೇ ನಷ್ಟ ಪರಿಹಾರವನ್ನು ಅವನಿಗೆ ಕೊಡಲು ನ್ಯಾಯಾಲಯವು ಅಗತ್ಯ ಪಡಿಸಬಹುದು.

(2) ಪ್ರತಿವಾದಿಯು ಯಾವುದೇ ದಾವೆಯನ್ನು ಯಶಸ್ವಿಯಾಗಿ.—

(3) ದಾವೆಯಲ್ಲಿ ತನ್ನ ವಿರುದ್ಧ ಜಾರಿಗೊಳಿಸಬೇಕೆಂದು ಕೇಳುವ ಲಿಖಿತವು ಶೂನ್ಯಕರಣೀಯವಾಗಿದೆ ಎಂಬ ಕಾರಣದ ಮೇಲೆ ಪ್ರತಿರೋಧಿಸುತ್ತಿದ್ದಲ್ಲಿ, ನ್ಯಾಯಾ ಲಯವು, ಇನ್ನೊಬ್ಬ ಪಕ್ಷಕಾರನಿಂದ ಪ್ರತಿವಾದಿಯು ಆ ಲಿಖಿತದ ಮೇರೆಗೆ ಯಾವುದೇ ಲಾಭವನ್ನು ಪಡೆದಿದ್ದರೆ ಸಾಧ್ಯವಿದ್ದ ಮಟ್ಟಿಗೆ ಅಂಥ ಲಾಭವನ್ನು ಆ ಪಕ್ಷಕಾರನಿಗೆ ಹಿಂದಿ ರುಗಿಸಲು ಅಥವಾ ಅದಕ್ಕಾಗಿ ನಷ್ಟ ಪರಿಹಾರ ಕೊಡಲು ಅವನನ್ನು ಅಗತ್ಯಪಡಿಸಬಹುದು;

(ಬಿ) ದಾವೆಯಲ್ಲಿ ತನ್ನ ವಿರುದ್ಧ ಜಾರಿಗೊಳಿಸಬೇಕೆಂದು ಕೇಳುವ ಒಪ್ಪಂದವು ಭಾರತ ಕರಾರು ಅಧಿನಿಯಮ, 1872 (1872ರ 9)ರ 11ನೆಯ ಪ್ರಕರಣದ ಮೇರೆಗೆ ತಾನು ಆ ಕರಾರನ್ನು ಮಾಡಿಕೊಳ್ಳಲು ಸಕ್ಷಮನಾಗಿರಲಿಲ್ಲವೆಂಬ ಆಧಾರದ ಮೇಲೆ ಶೂನ್ಯವಾದುದಾಗಿದೆ ಎಂದು ಪ್ರತಿರೋಧಿಸುತ್ತಿದ್ದಲ್ಲಿ, ಪ್ರತಿವಾದಿಯು ಇನ್ನೊಬ್ಬ ಪಕ್ಷ ಕಾರನಿಂದ ಆ ಒಪ್ಪಂದದ ಮೇರೆಗೆ ಯಾವುದೇ ಲಾಭವನ್ನು ಪಡೆದುಕೊಂಡಿದ್ದರೆ ಆ ಲಾಭ ವನ್ನು ಸಾಧ್ಯವಿದ್ದ ಮಟ್ಟಿಗೆ ಮತ್ತು ತಾನು ಅಥವಾ ತನ್ನ ಸಂಪದವು ಅದರಿಂದ ಲಾಭ ಹೊಂದಿರುವ ಮಟ್ಟಿಗೆ ಆ ಪಕ್ಷಕಾರನಿಗೆ ಹಿಂದಿರುಗಿಸಲು ನ್ಯಾಯಾಲಯವು ಅಗತ್ಯಪಡಿಸ ಬಹುದು.

## ಅಧ್ಯಾಯ—VI

### ಘೋಷಣಾತ್ಮಕ ಡಿಕ್ರಿಗಳು

34. ಸ್ಥಾನಮಾನ ಅಥವಾ ಅಧಿಕಾರವನ್ನು ಘೋಷಿಸುವ ಬಗ್ಗೆ ನ್ಯಾಯಾಲಯದ ವಿವೇಚನೆ.—ಯಾವುದೇ ವಿಧಿವ್ಯಕ್ತಿತ್ವವನ್ನು ಅಥವಾ ಯಾವುದೇ ಸ್ವತ್ತಿನ ಬಗ್ಗೆ ಯಾವುದೇ

ಅಧಿಕಾರ ಹೊಂದಿರುವುದಕ್ಕೆ ಹಕ್ಕುಳ್ಳ ಯಾವನೇ ವ್ಯಕ್ತಿಯು, ಅಂಥ ವ್ಯಕ್ತಿತ್ವಕ್ಕೆ ಅಥವಾ ಅಧಿಕಾರಕ್ಕೆ ತನ್ನ ಹಕ್ಕನ್ನು ನಿರಾಕರಿಸುವಲ್ಲಿ ಹಿತಾಸಕ್ತನಾದ ಯಾವನೇ ವ್ಯಕ್ತಿಯ ವಿರುದ್ಧ ದಾವೆ ಹೂಡಬಹುದು, ಮತ್ತು ನ್ಯಾಯಾಲಯವು ತನ್ನ ವಿವೇಚನಾನುಸಾರ ಅವನು ಹಾಗೆ ಹಕ್ಕುಳ್ಳವನಾಗಿರುವನೆಂದು ಅದರಲ್ಲಿ ಘೋಷಿಸಬಹುದು, ಮತ್ತು ವಾದಿಯು ಅಂಥ ದಾವೆಯಲ್ಲಿ ಇನ್ನೂ ಹೆಚ್ಚಿನ ಯಾವ ಪರಿಹಾರವನ್ನೂ ಕೇಳಬೇಕಾಗಿಲ್ಲ,

ಪರಂತು, ವಾದಿಯು ಹಕ್ಕಿನ ಬಗ್ಗೆ ಕೇವಲ ಘೋಷಣೆಗಿಂತ ಹೆಚ್ಚಾಗಿ ಇನ್ನೂ ಹೆಚ್ಚಿನ ಪರಿಹಾರವನ್ನು ಕೇಳಬಹುದಾಗಿದ್ದು ಅದನ್ನು ಕೇಳದಿದ್ದರೆ, ಯಾವ ನ್ಯಾಯಾಲಯವೂ ಅಂಥ ಯಾವ ಘೋಷಣೆಯನ್ನೂ ಮಾಡತಕ್ಕುದಲ್ಲ.

ವಿವರಣೆ.—ಸ್ವತ್ತಿನ ಒಬ್ಬ ನ್ಯಾಸಧಾರಿಯು, ಯಾವನು ಅಸ್ತಿತ್ವದಲ್ಲಿಲ್ಲವೊ ಮತ್ತು ಅಸ್ತಿತ್ವದಲ್ಲಿದ್ದರೆ ತಾನು ಯಾವನ ನ್ಯಾಸಧಾರಿಯಾಗಬಹುದಾಗಿತ್ತೋ ಅವನ ಹಕ್ಕಿಗೆ ವಿರುದ್ಧವಾದ ಹಕ್ಕನ್ನು ''ನಿರಾಕರಿಸಲು ಹಿತಾಸಕ್ತನಾದ ವ್ಯಕ್ತಿ''ಯಾಗಿರುತ್ತಾನೆ.

35. ಘೋಷಣೆಯ ಪರಿಣಾಮ.—ಈ ಅಧ್ಯಾಯದ ಮೇರೆಗೆ ಮಾಡಿದ ಘೋಷಣೆಯು ದಾವೆಯ ಪಕ್ಷಕಾರರನ್ನು, ಅನುಕ್ರಮವಾಗಿ ಅವರ ಮೂಲಕ ಕ್ಲೇಮು ಮಾಡುವ ವ್ಯಕ್ತಿಗಳನ್ನು, ಮತ್ತು ಪಕ್ಷಕಾರರಲ್ಲಿ ಯಾರಾದರೂ ನ್ಯಾಸಧಾರಿಗಳಾಗಿರುವಲ್ಲಿ, ಘೋಷಣೆ ಮಾಡಿದ ದಿನಾಂಕದಂದು ಯಾವ ವ್ಯಕ್ತಿಗಳು ಬದುಕಿದ್ದರೆ ಸದರಿ ಪಕ್ಷಕಾರರು ಅವರ ನ್ಯಾಸಧಾರಿಗಳಾಗಬಹುದಾಗಿತ್ತೋ ಆ ವ್ಯಕ್ತಿಗಳನ್ನು ಮಾತ್ರ ಬಂಧಿಸುತ್ತದೆ.

## ಭಾಗ–೩

## ನಿವಾರಕ ಪರಿಹಾರ

## ಅಧ್ಯಾಯ—VII

### ಸಾಮಾನ್ಯ ನಿರ್ಬಂಧಾಜ್ಞೆಗಳು

36. ನಿವಾರಕ ಪರಿಹಾರವನ್ನು ಕೊಡುವ ಬಗ್ಗೆ.—ನಿವಾರಕ ಪರಿಹಾರವನ್ನು ನ್ಯಾಯಾಲಯದ ವಿವೇಚನಾನುಸಾರ, ಹಂಗಾಮಿ ಅಥವಾ ಶಾಶ್ವತ ನಿರ್ಬಂಧಾಜ್ಞೆಯ ಮೂಲಕ ಕೊಡಲಾಗುವುದು.

37. ಹಂಗಾಮಿ ಮತ್ತು ಶಾಶ್ವತ ನಿರ್ಬಂಧಾಜ್ಞೆಗಳು.—(1) ಹಂಗಾಮಿ ನಿರ್ಬಂಧಾಜ್ಞೆಗಳು ಒಂದು ನಿರ್ದಿಷ್ಟ ಕಾಲದ ವರೆಗೆ ಅಥವಾ ನ್ಯಾಯಾಲಯದ ಮುಂದಿನ ಆದೇಶದ ವರೆಗೆ ಮುಂದುವರಿಯುವಂಥವು ಮತ್ತು ಅವುಗಳನ್ನು ದಾವೆಯ ಯಾವುದೇ ಹಂತದಲ್ಲಿ ಕೊಡಬಹುದು, ಮತ್ತು ಅವು ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5)ರ ಮೂಲಕ ವಿನಿಯಮಿತವಾಗುತ್ತವೆ.

(2) ಶಾಶ್ವತ ನಿರ್ಬಂಧಾಜ್ಞೆಯು ದಾವೆಯ ವಿಚಾರಣೆಯಲ್ಲಿ ಮತ್ತು ಅದರ ಗುಣದೋಷಗಳ ಮೇಲೆ ಡಿಕ್ರಿಯ ಮೂಲಕ ಮಾತ್ರ ಕೊಡಬಹುದು: ಪ್ರತಿವಾದಿಯು ಆ ಮೂಲಕ ವಾದಿಯ ಅಧಿಕಾರಿಗಳಿಗೆ ವಿರುದ್ಧವಾದ ಅಧಿಕಾರವನ್ನು ಪ್ರತಿಪಾದಿಸದಿರಲು ಅಥವಾ ಯಾವುದೇ ಕಾರ್ಯವನ್ನು ಮಾಡದೆ ಇರಲು ಶಾಶ್ವತವಾಗಿ ಬದ್ಧನಾಗಿರುವನು.

## ಅಧ್ಯಾಯ-VIII

### ಶಾಶ್ವತ ನಿರ್ಬಂಧಾಜ್ಞೆಗಳು

38. ಶಾಶ್ವತ ನಿರ್ಬಂಧಾಜ್ಞೆಗಳನ್ನು ಯಾವಾಗ ಮಾಡಬಹುದು.—(1) ಈ ಅಧ್ಯಾಯದಲ್ಲಿ ಇರುವ ಅಥವಾ ತನ್ಮೂಲಕ ನಿರ್ದೇಶಿಸಲ್ಪಟ್ಟ ಇತರ ಉಪಬಂಧಗಳಿಗೆ ಒಳಪಟ್ಟು ವಾದಿಗೆ ಅನುಕೂಲಕರವಿರುವ ಸ್ಪಷ್ಟವಾದ ಅಥವಾ ಸೂಚ್ಯವಾದ ಯಾವುದೇ ಹೊಣೆಗಾರಿಕೆಯ ಭಂಗವನ್ನು ತಡೆಯಲು ಅವನ ಪರವಾಗಿ ಶಾಶ್ವತ ನಿರ್ಬಂಧಾಜ್ಞೆಯನ್ನು ಮಾಡಬಹುದು.

(2) ಯಾವುದೇ ಅಂಥ ಹೊಣೆಗಾರಿಕೆಯು ಕರಾರಿನಿಂದ ಉದ್ಭವಿಸಿದಾಗ, ನ್ಯಾಯಾಲಯವು ಅಧ್ಯಾಯ-IIರಲ್ಲಿರುವ ನಿಯಮ ಮತ್ತು ಉಪಬಂಧಗಳಿಂದ ಮಾರ್ಗದರ್ಶಿತವಾಗತಕ್ಕುದು.

(3) ಪ್ರತಿವಾದಿಯು ಸ್ವತ್ತಿನ ಬಗ್ಗೆ ವಾದಿಗೆ ಇರುವ ಅಧಿಕಾರವನ್ನು ಅಥವಾ ಅದರ ಅನುಭೋಗವನ್ನು ಆಕ್ರಮಿಸಿದರೆ ಅಥವಾ ಆಕ್ರಮಿಸುವುದಾಗಿ ಹೆದರಿಸಿದರೆ, ನ್ಯಾಯಾಲಯವು ಈ ಕೆಳಗಿನ ಸಂದರ್ಭಗಳಲ್ಲಿ ಶಾಶ್ವತ ನಿರ್ಬಂಧಾಜ್ಞೆಯನ್ನು ಮಾಡಬಹುದು, ಎಂದರೆ:—

(ಕ) ಪ್ರತಿವಾದಿಯು ವಾದಿಯ ಪರವಾಗಿ ಸ್ವತ್ತಿನ ನ್ಯಾಸ ಧಾರಿಯಾಗಿರುವಲ್ಲಿ,

(ಖ) ಆಕ್ರಮಣದಿಂದ ವಾಸ್ತವಿಕವಾಗಿ ಉಂಟಾದ ಅಥವಾ ಉಂಟಾಗಬಹುದಾದ ಹಾನಿಯನ್ನು ನಿಶ್ಚಯಿಸಲು ಯಾವುದೇ ಮಾಪಕವಿಲ್ಲದಿರುವಲ್ಲಿ;

(ಗ) ದ್ರವ್ಯ ರೂಪದ ನಷ್ಟ ಪರಿಹಾರವು ತಕ್ಕ ಪರಿಹಾರವಾಗದಿರುವಂತಹ ಆಕ್ರಮಣವಾಗಿರುವಲ್ಲಿ;

(ಘ) ನ್ಯಾಯಿಕ ವ್ಯವಹರಣೆಗಳ ಬಾಹುಳ್ಯವನ್ನು ತಡೆಯಲು ನಿರ್ಬಂಧಾಜ್ಞೆಯು ಅವಶ್ಯಕವಾಗಿರುವಲ್ಲಿ,

39 ಕರ್ತವ್ಯ ನಿರ್ಬಂಧಾಜ್ಞೆಗಳು.—ಹೊಣೆಗಾರಿಕೆಯ ಭಂಗವನ್ನು ನಿವಾರಿಸುವುದಕ್ಕಾಗಿ, ನ್ಯಾಯಾಲಯವು ಜಾರಿಗೊಳಿಸಲು ಸಮರ್ಥವಾದಂಥ ಕೆಲವು ಕಾರ್ಯಗಳ ಪಾಲನೆಗೆ ಒತ್ತಾಯ ಪಡಿಸುವುದು ಅವಶ್ಯಕವಾಗಿರುವಾಗ, ನ್ಯಾಯಾಲಯವು, ತನ್ನ ವಿವೇಚನಾನುಸಾರ, ದೂರಲಾದ ಭಂಗವನ್ನು ನಿವಾರಿಸುವುದಕ್ಕೂ ಮತ್ತು ಅಗತ್ಯವಾದ ಕಾರ್ಯಗಳ ಪಾಲನೆಯನ್ನು ಒತ್ತಾಯ ಪಡಿಸುವುದಕ್ಕೂ ನಿರ್ಬಂಧಾಜ್ಞೆಯನ್ನು ಮಾಡಬಹುದು.

40 ನಿರ್ಬಂಧಾಜ್ಞೆಯ ಬದಲಾಗಿ ಅಥವಾ ಅದರ ಜೊತೆಗೆ ನಷ್ಟ ಪರಿಹಾರಗಳು—

(1) ವಾದಿಯು, ಪ್ರಕರಣ 38ರ ಮೇರೆಗೆ ಶಾಶ್ವತ ನಿರ್ಬಂಧಾಜ್ಞೆಗಾಗಿ ಅಥವಾ ಪ್ರಕರಣ 39ರ ಮೇರೆಗೆ ಕರ್ತವ್ಯ ನಿರ್ಬಂಧಾಜ್ಞೆಗಾಗಿ ಇರುವ ದಾವೆಯಲ್ಲಿ. ಅಂಥ ನಿರ್ಬಂಧಾಜ್ಞೆಯ ಜೊತೆಗೆ ಅಥವಾ ಅದಕ್ಕೆ ಬದಲಾಗಿ ನಷ್ಟ ಪರಿಹಾರವನ್ನು ಕ್ಲೇಮು ಮಾಡಬಹುದು. ಮತ್ತು ನ್ಯಾಯಾಲಯವು, ತಾನು ಯುಕ್ತವೆಂದು ಪರ್ಯಾಲೋಚಿಸಿದರೆ, ಅಂಥ ನಷ್ಟ ಪರಿಹಾರವನ್ನು ಕೊಡಬಹುದು.

(2) ವಾದಿಯು ತನ್ನ ವಾದಪತ್ರದಲ್ಲಿ ಅಂಥ ಪರಿಹಾರವನ್ನು ಕ್ಲೇಮು ಮಾಡಿದ್ದ ಹೊರತು ನಷ್ಟ ಪರಿಹಾರಗಳ ಬಗ್ಗೆ ಈ ಪ್ರಕರಣದ ಮೇರೆಗೆ ಯಾವ ಪರಿಹಾರವನ್ನೂ ಕೊಡತಕ್ಕದಲ್ಲ.

ಪರಂತು, ಅಂಥ ನಷ್ಟ ಪರಿಹಾರಗಳನ್ನು ವಾದಪತ್ರದಲ್ಲಿ ಕ್ಲೇಮು ಮಾಡಿರದಲ್ಲಿ, ನ್ಯಾಯಾಲಯವು, ವ್ಯವಹರಣೆಯ ಯಾವುದೇ ಹಂತದಲ್ಲಿ, ಅಂಥ ಕ್ಲೇಮನ್ನು ಸೇರಿಸಲು ನ್ಯಾಯವೆನಿಸಬಹುದಾದಂಥ ನಿಬಂಧನೆಗಳ ಮೇಲೆ ಅಂಥ ವಾದಪತ್ರವನ್ನು ತಿದ್ದುಪಡಿ ಮಾಡಲು ವಾದಿಗೆ ಅವಕಾಶ ಕೊಡಬಹುದು.

(3) ವಾದಿಯು ಪರವಾಗಿರುವ ಹೊಣೆಗಾರಿಕೆಯ ಭಂಗವನ್ನು ನಿವಾರಿಸುವ ಬಗೆಗಿನ ದಾವೆಯ ವಜಾ ಮಾಡುವಿಕೆಯು, ಅಂಥ ಭಂಗಕ್ಕಾಗಿ ನಷ್ಟ ಪರಿಹಾರ ಹೊಂದಲು ದಾವೆ ಹೂಡುವ ಅವನ ಅಧಿಕಾರಕ್ಕೆ ಪ್ರತಿಬಂಧಕವಾಗತಕ್ಕದು.

41. **ನಿರ್ಬಂಧಾಜ್ಞೆಯ ನಿರಾಕರಣೆ.**—ನಿರ್ಬಂಧಾಜ್ಞೆಯನ್ನು,—

(ಕ) ನಿರ್ಬಂಧಾಜ್ಞೆಯನ್ನು ಕೇಳುವ ದಾವೆಯನ್ನು ಹೂಡುವಾಗ ಇನ್ನೂ ಇತ್ಯರ್ಥಗೊಳ್ಳಲಿರುವ ಯಾವುದೇ ನ್ಯಾಯಿಕ ವ್ಯವಹರಣೆಯನ್ನು ನಡೆಸದಂತೆ ಯಾವನೇ ವ್ಯಕ್ತಿಯನ್ನು ಪ್ರತಿಬಂಧಿಸಲು, ಅಂಥ ಪ್ರತಿಬಂಧವು ವ್ಯವಹರಣೆಗಳ ಬಾಹುಳ್ಯವನ್ನು ನಿವಾರಿಸಲು ಅವಶ್ಯಕವಾಗಿದ್ದ ಹೊರತು,

(ಖ) ಯಾವ ನ್ಯಾಯಾಲಯದಿಂದ ನಿರ್ಬಂಧಾಜ್ಞೆಯನ್ನು ಕೇಳಲಾಗುತ್ತಿದೆಯೋ ಅದಕ್ಕೆ ಅಧೀನವಾಗಿರದ ನ್ಯಾಯಾಲಯದಲ್ಲಿ ಯಾವುದೇ ವ್ಯವಹರಣೆಯನ್ನು ಹೂಡದಂತೆ ಅಥವಾ ನಡೆಸದಂತೆ ಯಾವನೇ ವ್ಯಕ್ತಿಯನ್ನು ಪ್ರತಿಬಂಧಿಸಲು;

(ಗ) ವಿಧಾಯಿ ನಿಕಾಯಕ್ಕೆ ಆವೇದನ ಮಾಡದಂತೆ ಯಾವನೇ ವ್ಯಕ್ತಿಯನ್ನು ಪ್ರತಿಬಂಧಿಸಲು,

(ಘ) ಕ್ರಿಮಿನಲ್ ವಿಷಯದಲ್ಲಿ ಯಾವುದೇ ವ್ಯವಹರಣೆಯನ್ನು ಹೂಡದಂತೆ ಅಥವಾ ನಡೆಸದಂತೆ, ಯಾವನೇ ವ್ಯಕ್ತಿಯನ್ನು ಪ್ರತಿಬಂಧಿಸಲು,

(ಙ) ಪಾಲನೆಯನ್ನು ನಿರ್ದಿಷ್ಟವಾಗಿ ಜಾರಿಗೊಳಿಸಲಾಗದ ಕರಾರಿನ ಭಂಗವನ್ನು ನಿವಾರಿಸಲು,

(ಚ) ಉಪದ್ರವಕಾರಿಯೆಂಬುದು ಸಕಾರಣವಾಗಿ ಸ್ಪಷ್ಟವಾಗದೆ ಇರುವ ಯಾವುದೇ ಕಾರ್ಯವನ್ನು, ಉಪದ್ರವಕಾರಿಯೆಂಬ ಕಾರಣದ ಮೇಲೆ ನಿವಾರಿಸಲು,

(ಛ) ವಾದಿಯ ಮೌನ ಸಮ್ಮತಿಯಿರುವ ಯಾವುದೇ ಮುಂದುವರಿಯುತ್ತಿರುವ ಭಂಗವನ್ನು ನಿವಾರಿಸಲು,

(ಜ) ನ್ಯಾಸಭಂಗದ ಸಂದರ್ಭವನ್ನುಳಿದು, ಯಾವುದೇ ಇತರ ಸಾಮಾನ್ಯ ರೀತಿಯ ಯಾವುದೇ ವ್ಯವಹರಣೆಯ ಮೂಲಕ ಅಷ್ಟೇ ಪರಿಣಾಮಕಾರಿಯಾದ ಪರಿಹಾರವನ್ನು ನಿಶ್ಚಿತವಾಗಿಯೂ ಪಡೆದುಕೊಳ್ಳಬಹುದಾಗಿರುವಾಗ,

(ಝ) ವಾದಿಯ ಅಥವಾ ಅವನ ಅಭಿಕರ್ತರ ನಡತೆಯು, ನ್ಯಾಯಾಲಯದ ಸಹಾಯ ಪಡೆಯಲು ಅವನನ್ನು ಹಕ್ಕಿಲ್ಲದವನನ್ನಾಗಿ ಮಾಡುವಂತಹುದಾಗಿರುವಾಗ,

(ಞ) ವಾದಿಗೆ ಆ ವಿಷಯದಲ್ಲಿ ವೈಯಕ್ತಿಕ ಹಿತಾಸಕ್ತಿಯಿಲ್ಲದಿರುವಾಗ,

ಕೊಡಲಾಗುವುದಿಲ್ಲ,

**42. ನಕಾರಾತ್ಮಕ ಒಪ್ಪಂದದ ಪಾಲನೆಗೆ ನಿರ್ಬಂಧಾಜ್ಞೆ.**—41ನೆಯ ಪ್ರಕರಣದ (ಜ) ಖಂಡದಲ್ಲಿ ಏನೇ ಇದ್ದರೂ, ಕರಾರು, ಯಾವುದೇ ಕಾರ್ಯವನ್ನು ಮಾಡುವ ಬಗ್ಗೆ ಒಂದು ಸಕಾರಾತ್ಮಕ ಒಪ್ಪಂದವನ್ನು, ಜೊತೆಗೆ ಒಂದು ಕಾರ್ಯವನ್ನು ಮಾಡದಿರಲು ಸ್ಪಷ್ಟವಾದ ಅಥವಾ ಸೂಚ್ಯವಾದ ನಕಾರಾತ್ಮಕ ಒಪ್ಪಂದವನ್ನು ಒಳಗೊಂಡಿರುವಲ್ಲಿ ನ್ಯಾಯಾಲಯವು ಸಕಾರಾತ್ಮಕ ಒಪ್ಪಂದದ ನಿರ್ದಿಷ್ಟ ಪಾಲನೆಯನ್ನು ಒತ್ತಾಯಪಡಿಸಲು ಸಮರ್ಥವಾಗದ ವಿದ್ಯಮಾನವು, ನಕಾರಾತ್ಮಕ ಒಪ್ಪಂದದ ಪಾಲನೆಯನ್ನು ಮಾಡಲು ನಿರ್ಬಂಧಾಜ್ಞೆಯನ್ನು ಮಾಡುವುದಕ್ಕೆ ಪ್ರತಿಬಂಧಕವಾಗತಕ್ಕುದಲ್ಲ,

ಪರಂತು, ತನ್ನ ಮೇಲೆ ಬಂಧಕವಾಗಿರುವ ಮಟ್ಟಿಗೆ ವಾದಿಯು ಕರಾರನ್ನು ಪಾಲಿಸಲು ತಪ್ಪಿರಕೂಡದು.

S. RAMAIAH,
Secretary to Government of India.

WD P 7011